ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸಪತ್ರಿಕೆ

ಸಂಪುಟ : 6 । ಸಂಚಿಕೆ : 5 । ಮೇ - 2024 । ಪುಟಗಳು : 20 । ಬೆಲೆ : 25/-

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

## ಭಾರತದ ಸಾರ್ವತ್ರಿಕ ಚುನಾವಣೆ - 2024



7 ಹಂತಗಳಲ್ಲಿ ಮತದಾನ
543 ಲೋಕಸಭಾ ಸ್ಥಾನಗಳು
97 ಕೋಟಿ ಮತದಾರರು





ಮೇ-1, ಕಾರ್ಮಿಕ ದಿನಾಚರಣೆ



ಮೇ-10,
ಮಾನವತಾವಾದಿ
ಶ್ರೀ ಬಸವೇಶ್ವರ ಜಯಂತಿ

# ಪತ್ತಿನ ಸಹಕಾರ ಮಹಾಮಂಡಳದ ವತಿಯಿಂದ ಮನವಿ: ಸಹಕಾರ ಸಂಘಗಳ ಅಧಿಕಾರಕ್ಕೆ ತಡೆ ನೀಡಿದ್ದ ಸರ್ಕಾರದ ಸುತ್ತೋಲೆಗೆ ಹೈಕೋರ್ಟ್ ತಡೆಯಾಜ್ಞೆ

**ಸರ್ಕಾರದ ಸುತ್ತೋಲೆಗೆ ತಡೆಯಾಜ್ಞೆ ನೀಡಿರುವ ಈ ಆದೇಶ ಕ್ರೆಡಿಟ್, ವಿವಿಧೋದ್ದೇಶ ಸೌಹಾರ್ದ ಸಹಿತ ರಾಜ್ಯದ ಎಲ್ಲಾ ಸಹಕಾರ ಸಂಘಗಳಿಗೆ ಅನ್ವಯವಾಗುತ್ತದೆ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.**

**ಬೆಂಗಳೂರು:** ಸಹಕಾರ ಸಂಘಗಳು ಸಂಗ್ರಹಿಸುತ್ತಿರುವ ಠೇವಣಿ ಮತ್ತು ವಿತರಿಸುವ ಸಾಲಗಳಿಗೆ ಬಡ್ಡಿದರ ನಿಗದಿಪಡಿಸುವ ಸಹಕಾರ ಸಂಘಗಳ ಅಧಿಕಾರಕ್ಕೆ ತಡೆ ನೀಡಿ ರಾಜ್ಯ ಸರ್ಕಾರ ಹೊರಡಿಸಿದ್ದ ಸುತ್ತೋಲೆಗೆ ಏಪ್ರಿಲ್ 8 ರಂದು ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ಸಹಕಾರ ಸಂಘಗಳ ಹಣವನ್ನು ಡಿಸಿಸಿ ಬ್ಯಾಂಕ್ ಅಥವಾ ಅಪೆಕ್ಸ್ ಬ್ಯಾಂಕ್‌ನಲ್ಲಿ ಇಡುವಂತೆಯೂ ಸರ್ಕಾರ ಹೊರಡಿಸಿರುವ ಸುತ್ತೋಲೆ ಕಾನೂನು ಬಾಹಿರ ಎಂದು ಹೈಕೋರ್ಟ್ ತಿಳಿಸಿದೆ.

ಪತ್ತಿನ ಸಹಕಾರ ಸಂಘಗಳ ಮಾತೃ ಸಂಸ್ಥೆಯಾಗಿರುವ ಪತ್ತಿನ ಸಹಕಾರ ಮಹಾಮಂಡಳವು ಪತ್ತಿನ ಸಂಘಗಳ ಪ್ರತಿನಿಧಿಯಾಗಿ ಹಾಗೂ ಸಂಘಗಳ ಹಿತಾಸಕ್ತಿಗೆ ಅನುಗುಣವಾಗಿ ಕರ್ನಾಟಕ ಉಚ್ಚನ್ಯಾಯಾಲಯದ ಮೊರೆ ಹೋಗಿರುತ್ತದೆ. ಹಿರಿಯ ನ್ಯಾಯವಾದಿ ಡಿ.ಆರ್.ರವಿಶಂಕರ್ ಅವರು ರಿಟ್ ಅರ್ಜಿ ಸಂಖ್ಯೆ:10071/2024 ದಾಖಲಿಸಿ ಸಹಕಾರ ಸಂಘಗಳು ಸಾಲಗಳ ಮೇಲೆ ನಿಗಡಿಪಡಿಸುವ ಬಡ್ಡಿ ಇನ್ನಿತರ ವೆಚ್ಚಗಳು, ದರಗಳು ಹಾಗೂ ಠೇವಣಿಗಳ ಮೇಲೆ ನೀಡುವ ಬಡ್ಡಿ ಇತ್ಯಾದಿ ಅಂಶಗಳನ್ನು ನಿಗದಿಪಡಿಸುವ ಅಧಿಕಾರ ರಾಜ್ಯ ಸರ್ಕಾರ ಹೊರಡಿಸಿರುವ ಸುತ್ತೋಲೆ ಕೂಡ ಕಾನೂನು ಬಾಹಿರವಾಗಿದೆ. ತಮ್ಮ ವ್ಯವಹಾರಗಳನ್ನು ನಡೆಸುವ ಸಂಪೂರ್ಣ ಅಧಿಕಾರ ಆಯಾಯ ಸೊಸೈಟಿಗಳಿಗೆ ಮಾತ್ರ ಇದೆ. ಅದು ಸಹಕಾರ ಸಂಘಗಳ ಸಂವಿಧಾನ ಬದ್ದ ಹಕ್ಕಾಗಿದೆ ಎಂದು ವಾದ ಮಂಡಿಸಿದ್ದರು. ಪತ್ತಿನ ಮಹಾಮಂಡಳದ ಮನವಿಯನ್ನು ಪುರಸ್ಕರಿಸಿ ಮಾನ್ಯ ಉಚ್ಚನ್ಯಾಯಾಲಯವು ಸರ್ಕಾರದ ಸುತ್ತೋಲೆಗೆ ತಡೆಯಾಜ್ಞೆ ನೀಡಿದೆ. ಹಾಗೆಯೇ ಸಹಕಾರ ಸಂಘಗಳು ಸಂಗ್ರಹಿಸುತ್ತಿರುವ ಠೇವಣಿ



ಮತ್ತು ವಿತರಿಸುವ ಸಾಲಗಳಿಗೆ ಬಡ್ಡಿದರ ನಿಗದಿಪಡಿಸುವ ಅಧಿಕಾರಕ್ಕೆ ರಾಜ್ಯ ಸರಕಾರ ತಡೆ ನೀಡಿ ಮತ್ತು ಸಹಕಾರ ಸಂಘಗಳು ತನ್ನ ಹಣವನ್ನು ಡಿಸಿಸಿ ಬ್ಯಾಂಕ್ ಅಥವಾ ಅಪೆಕ್ಸ್ ಬ್ಯಾಂಕ್‌ನಲ್ಲಿ ಇಡಬೇಕು ಎಂದು ರಾಜ್ಯ ಸರ್ಕಾರ ಹೊರಡಿಸಿದ್ದ ಸುತ್ತೋಲೆಯನ್ನು ಪ್ರಶ್ನಿಸಿ 20ಕ್ಕೂ ಅಧಿಕ ಸಹಕಾರ ಸಂಘಗಳು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು. ಅರ್ಜಿದಾರರ ಪರ ಹೈಕೋರ್ಟ್ ಹಿರಿಯ ನ್ಯಾಯವಾದಿ ಪಿ.ಪಿ.ಹೆಗ್ಡೆ ಅವರು ವಾದ ಮಂಡಿಸಿದ್ದರು. ಹಿರಿಯ ನ್ಯಾಯಾವಾದಿ ಪಿ.ಪಿ.ಹೆಗ್ಡೆ ಅವರು ಸಹಕಾರ ಸಂಘಗಳ ಹಣವನ್ನು ಡಿಸಿಸಿ ಬ್ಯಾಂಕ್ ಅಥವಾ ಅಪೆಕ್ಸ್ ಬ್ಯಾಂಕ್ ನಲ್ಲಿ ಇಡಬೇಕು ಎಂಬ ಆದೇಶವನ್ನು ಪುರಸ್ಕರಿದ ನ್ಯಾಯಮೂರ್ತಿ ಸುನಿಲ್ ದತ್ ಯಾದವ್ ಅವರು ಸರ್ಕಾರದ ಸುತ್ತೋಲೆಗೆ ತಡೆಯಾಜ್ಞೆ ನೀಡಿ ವಿಚಾರಣೆಯನ್ನು ಮುಂದೂಡಿದ್ದಾರೆ.

## ದೂರ ಶಿಕ್ಷಣದ ಮೂಲಕ ಸಹಕಾರ ಉನ್ನತ ಡಿಪ್ಲೋಮಾ (ಹೆಚ್.ಡಿ.ಸಿ.ಎಮ್) ತರಬೇತಿಗೆ ಅರ್ಜಿ ಆಹ್ವಾನ

ಪ್ರಾದೇಶಿಕ ಸಹಕಾರ ನಿರ್ವಹಣಾ ಕೇಂದ್ರ ಬೆಂಗಳೂರು, ಇವರು ನೀಡುತ್ತಿರುವ ಸಹಕಾರ ನಿರ್ವಹಣೆಯಲ್ಲಿ ಉನ್ನತ ಡಿಪ್ಲೊಮಾ ದೂರ ಶಿಕ್ಷಣ ಕೋರ್ಸ್‌ನ್ನು ಮಂಗಳೂರು ಕೇಂದ್ರಿತವಾಗಿ ಆತ್ಮಶಕ್ತಿ ವಿವಿಧೋದ್ಧೇಶ ಸಹಕಾರಿ ಸಂಘ (ನಿ.) ಪಡೀಲ್, ಮಂಗಳೂರು ಇವರ ಸಹಭಾಗಿತ್ವದಲ್ಲಿ ಈಗಾಗಲೇ 7 ಬ್ಯಾಚ್‌ಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದು, ಮುಂದಿನ ಬ್ಯಾಚ್‌ಗೆ ನೋಂದಣಿ ಪ್ರಕ್ರಿಯೆಯು ಆರಂಭವಾಗಿದ್ದು, ಆಸಕ್ತ ಸಹಕಾರ ಸಂಘಗಳ ಸಿಬ್ಬಂದಿಗಳು ಹಾಗೂ ಪದವೀದರರು ಕೋರ್ಸಿನ ವಿವರಗಳನ್ನು ಮತ್ತು ಅರ್ಜಿಯನ್ನು ಆತ್ಮಶಕ್ತಿ ವಿವಿಧೋದ್ಧೇಶ ಸಹಕಾರಿ ಸಂಘದ ಹತ್ತಿರದ ಶಾಖೆಯಲ್ಲಿ ಪಡೆದು ಭರ್ತಿ ಮಾಡಿ ನಿಗದಿತ ಶುಲ್ಕದೊಂದಿಗೆ ದಿನಾಂಕ : 30.05.2024ರ ಒಳಗೆ ಆತ್ಮಶಕ್ತಿ ವಿವಿಧೋದ್ಧೇಶ ಸಹಕಾರಿ ಸಂಘ (ನಿ.) ಆತ್ಮಶಕ್ತಿ ಸೌಧ, ಬೈರಾಡಿಕೆರೆಯ ಹತ್ತಿರ, ಪಡೀಲ್, ಮಂಗಳೂರು–07 ಅಥವಾ ಸಂಘದ ಹತ್ತಿರದ ಶಾಖೆಗೆ ತಲುಪುವಂತೆ ಕಳುಹಿಸಿಕೊಡುವುದು.

ಮೊದಲು ನೋಂದಣಿ ಮಾಡುವ 100 ಕೋರ್ಸ್ ಆಕಾಂಕ್ಷಿಗಳಿಗೆ ಅವಕಾಶ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ : 0824–2003355, 2008855, 2007755, 8151057555, 8150063555ಕ್ಕೆ ಸಂಪರ್ಕಿಸಬಹುದು.

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತ ಮಂಡಳಿ


ಶಿದ್ದನಗೌಡ ಸಂಣರಾಮನಗೌಡ ಪಾಟೀಲ
ಸಹಕಾರಿ ಪಿತಾಮಹ


ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು


ಶ್ರೀ ವಿ. ರಾಜು
ಅಧ್ಯಕ್ಷರು


ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು


ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ನಿರ್ದೇಶಕರು


ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು


ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು


ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು


ಶ್ರೀ ಎಂ.ಜಿ. ನರೇಂದ್ರ ಕುಮಾರ
ನಿರ್ದೇಶಕರು


ಶ್ರೀ ಡಿ. ಚನ್ನಯ್ಯ
ನಿರ್ದೇಶಕರು


ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು


ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು



ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು


ಶ್ರೀ ಧರೆಪ್ಪ ಎಂ. ಆಲಗೂರ
ನಿರ್ದೇಶಕರು


ಶ್ರೀ ಗುರುಪಾದಪ್ಪಗೌಡ ಬಿ. ಪಾಟೀಲ
ನಿರ್ದೇಶಕರು


ಶ್ರೀ ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು


ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು


ಶ್ರೀ ಶೇಖರಗೌಡ ಮಾಲಿ ಪಾಟೀಲ
ನಿರ್ದೇಶಕರು


ಶ್ರೀ ಹೆಚ್.ಟಿ. ನಾಗೇಶ್
ನಿರ್ದೇಶಕರು


ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು



ಶ್ರೀ ಉಮೇಶ ಶಿ ಬಾಳಿ
ನಿರ್ದೇಶಕರು


ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು


ಶ್ರೀ ಚಿತ್ತರಂಜನ್ ಬೋಳಾರ್
ನಿರ್ದೇಶಕರು


ಶ್ರೀ ಪ್ರಜ್ವಲ್ ಕೆ.ಎನ್.
ಮುಖ್ಯಕಾರ್ಯನಿರ್ವಹಣಾಧಿಕಾರಿ

SAHAKARA VARTHA PATHRIKE KANNADA MONTHLY
RNI-Reg No. KARKAN/2018/75796
Post Reg No. KA-BGW/1816/2022-24
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 30th of Previous Month
License to post without prepayment
PMG BG/WPP-405/2022-2024




ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು.
ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

Printed at : Biligiri Printers
Chamrajpet, Bengaluru - 18

## ಸಂಪಾದಕೀಯ



**ವಿ. ರಾಜು**

**ಅಧ್ಯಕ್ಷರು**

ಹೆಚ್ಚಿನ ಪ್ರಮಾಣದಲ್ಲಿ ಮತದಾರರು ಮತದಾನ ಕೇಂದ್ರಗಳಿಗೆ ತೆರಳಿ ತಮ್ಮ ಹಕ್ಕನ್ನು ಚಲಾಯಿಸಲು ಇದು ಸಕಾಲವಾಗಿದೆ. ಜೂನ್ 4ರಂದು ಫಲಿತಾಂಶ ಪ್ರಕಟವಾಗಲಿದ್ದು ಮತದಾರ ಯಾರ ಕೈ ಹಿಡಿಯಲಿದ್ದಾರೆ ಎಂದು ಸ್ಪಷ್ಟವಾಗಿ ತಿಳಿಯಲಿದೆ. ಕರ್ನಾಟಕದಲ್ಲಿ ಎರಡು ಹಂತಗಳಲ್ಲಿ 28 ಲೋಕಸಭಾ ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು ಪ್ರಮುಖ ಪಕ್ಷಗಳ ಅಭ್ಯರ್ಥಿಗಳ ಆಯ್ಕೆಯೂ ಪೂರ್ಣಗೊಂಡಿದೆ. ಪ್ರತಿಯೊಬ್ಬ ಮತದಾರರು ಜವಾಬ್ದಾರಿಯುತವಾಗಿ ಮತದಾನ ಮಾಡುವುದರಿಂದ ಸುಭದ್ರ ಸರ್ಕಾರ, ಅಭಿವೃದ್ಧಿಯ ಪಥದಲ್ಲಿ ಕೊಂಡೊಯ್ಯುವ ಸರ್ಕಾರದ ರಚನೆಗೆ ಕಾರಣವಾಗಲಿದ್ದಾರೆ. ಆದ್ದರಿಂದ ಮತದಾನ ಹಕ್ಕನ್ನು ತಪ್ಪದೇ ಚಲಾಯಿಸಿ.

# ಸಹಕಾರಿಗಳೊಂದಿಗೆ ಸಮಾಲೋಚನೆ ಅಗತ್ಯ

## ಭಾರತ ಸಹಕಾರ ಚಳವಳಿಗೆ 120 ವರ್ಷಗಳ ಸಂಭ್ರಮ

ಸರ್ಕಾರದ ಪೋಷಣೆಯಲ್ಲಿ ಬೆಳೆದಿರುವ ಸಹಕಾರ ಚಳವಳಿ ಮುಕ್ತವಾಗಿ ಸ್ವಾಯತ್ತತೆಯಿಂದ ಕಾರ್ಯನಿರ್ವಹಿಸಬೇಕಾದುದು ಅತ್ಯಗತ್ಯ.

ದೇಶದ ಸಹಕಾರ ಚಳವಳಿಯ ಬೆಳವಣಿಗೆಯಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಸಹಕಾರ ಹೈನೋದ್ಯಮ ಸೇರಿ ಹಲವು ವಲಯಗಳು ಮಹತ್ತರ ಪಾತ್ರ ವಹಿಸಿ ಆರ್ಥಿಕ ಸಾಮಾಜಿಕ ಕೊಡುಗೆ ನೀಡುತ್ತಾ ಬಂದಿವೆ.

ಸಹಕಾರ ಸಂಸ್ಥೆಗಳ ನಡುವೆ ಪರಸ್ಪರ ಸಹಕಾರ ಅಗತ್ಯ ಇದು ಚಳವಳಿಯ ಅಭಿವೃದ್ಧಿಗೆ ವಿಶೇಷ ಕೊಡುಗೆ ನೀಡುತ್ತದೆ. ಸಹಕಾರ ಇಲಾಖೆ ಸಹಕಾರ ಸಂಸ್ಥೆಗಳಿಗೆ ಆಗಾಗ್ಗೆ ಉಪಯುಕ್ತ ಸಲಹೆ ಸೂಚನೆಗಳನ್ನು ನೀಡುತ್ತಾ ಮಾರ್ಗದರ್ಶಿಯಾಗಿ ಕೆಲಸ ಮಾಡುತ್ತಿದೆ. ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ರಾಜ್ಯದ ಎಲ್ಲಾ ಸಹಕಾರಿ ಮುಖಂಡರುಗಳ ಸಭೆ ನಡೆಸಿ ಸಹಕಾರಿಗಳು ನೀಡುವ ಉಪಯುಕ್ತ ಸಲಹೆಗಳನ್ನು ಸ್ವೀಕರಿಸಿ ಸೂಕ್ತ ನಿರ್ಧಾರಗಳನ್ನು ಕೈಗೊಂಡಲ್ಲಿ ಚಳವಳಿ ಮತ್ತಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಲಿದೆ.

ಇದರಿಂದ ಸಹಕಾರಿಗಳಲ್ಲಿ ಬದ್ಧತೆ ಹೆಚ್ಚುವುದಲ್ಲದೆ ಸದಸ್ಯರಿಗೆ ಸದಸ್ಯ ಸೇವೆಗಳನ್ನು ವಿಸ್ತರಿಸಲು ಸಹಕಾರಿಯಾಗಲಿದೆ. ಈಗಾಗಲೇ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ಯೋಜನೆಗಳನ್ನು ಸಹಕಾರ ಸಂಸ್ಥೆಗಳು ಯಶಸ್ವಿಯಾಗಿ ಅನುಷ್ಠಾನಕ್ಕೆ ತರುತ್ತಿರುವುದನ್ನು ಗಮನಿಸಬಹುದಾಗಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮುಂಬರುವ ದಿನಗಳಲ್ಲಿ ಸಹಕಾರ ಚಳವಳಿ ಬಲಿಷ್ಠಗೊಳಿಸಲು ಸಹಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿ ಎಂಬುದು ನಮ್ಮ ಆಶಯವೂ ಆಗಿದೆ.

ಮೇ.1 ಕಾರ್ಮಿಕರ ದಿನಾಚರಣೆ – ದೇಶದ ಅಭಿವೃದ್ಧಿಗೆ ಶ್ರಮಿಸುವ ಶ್ರಮಿಕರ ಸೇವೆಯನ್ನು ಸ್ಮರಿಸುವ ದಿನವಾಗಿದೆ. ಹಾಗೆಯೇ ಮೇ 1 ರಂದು ಕಾಯಕಯೋಗಿ ಶ್ರೀ ಬಸವೇಶ್ವರ ಜಯಂತಿಯೂ ಹೌದು. ಬಸವೇಶ್ವರರು ಸಮಸಮಾಜ ನಿರ್ಮಾಣ ಮಾಡುವಲ್ಲಿ 12ನೇ ಶತಮಾನದಲ್ಲಿಯೇ ದಾರಿದೀಪವಾಗಿದ್ದರು. ಅನುಭವ ಮಂಟಪ ಮೂಲಕ ಪ್ರಜಾಪ್ರಭುತ್ವದ ತಳಹದಿಗೂ ಕಾರಣೀಭೂತರಾಗಿದ್ದರು. ಅವರ ಆದರ್ಶ ಚಿಂತನೆಗಳನ್ನು ಸ್ಮರಿಸುವ ಮೂಲಕ ಉತ್ತಮ ಸಮಾಜ ನಿರ್ಮಿಸೋಣ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀ ವಿ. ರಾಜು**

ಕಾರ್ಯನಿರ್ವಾಹಕ ಸಂಪಾದಕರು:
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ**

ಸದಸ್ಯರು : **ಡಾ|| ಸಂಜಯ ಪಿ. ಹೊಸಮಠ**
**ಶ್ರೀ ಎಂ.ಜಿ. ನರೇಂದ್ರಕುಮಾರ**
**ಶ್ರೀ ಕೆ. ಕೃಷ್ಣಮೂರ್ತಿ**
**ಶ್ರೀ ಡಿ.ಆರ್. ನಾಗೇಶಪ್ಪ**
**ಶ್ರೀ ಹೊನ್ನಯ್ಯ ವೀ ಹಿರೇಮಠ**
**ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು :
**ಪ್ರಜ್ವಲ್ ಕೆ.ಎನ್.**
ಮುಖ್ಯಕಾರ್ಯನಿರ್ವಹಣಾಧಿಕಾರಿ

# ಅಂತಾರಾಷ್ಟ್ರೀಯ ಸಹಕಾರ ವರ್ಷ ಹಿನ್ನೆಲೆಯಲ್ಲಿ ನವದೆಹಲಿಯಲ್ಲಿ ವಿಶ್ವಸಮ್ಮೇಳನ



**ನವದೆಹಲಿ :** ಅಂತಾರಾಷ್ಟ್ರೀಯ ಸಹಕಾರ ಒಕ್ಕೂಟವು 2025ರ ವರ್ಷವನ್ನು ಅಂತಾರಾಷ್ಟ್ರೀಯ ಸಹಕಾರ ವರ್ಷ ಎಂದು ಘೋಷಣೆ ಮಾಡಿ ಸಹಕಾರ ಚಳವಳಿಯನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮತ್ತಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ನವದೆಹಲಿಯ ಇಫ್ಕೋ ಸಂಸ್ಥೆಯ ಸಹಯೋಗದಲ್ಲಿ ನವೆಂಬರ್ ಮಾಹೆಯಲ್ಲಿ ವಿಶ್ವ ಸಮ್ಮೇಳನ ಮತ್ತು ಅಂತಾರಾಷ್ಟ್ರೀಯ ಸಾಮಾನ್ಯ ಸಭೆಯನ್ನು ಆಯೋಜಿಸುವುದಾಗಿ ತಿಳಿಸಿದೆ. ಈ ವಿಷಯವನ್ನು ಇಫ್ಕೋ ಸಾರ್ವಜನಿಕ ಸಂಪರ್ಕಾಧಿಕಾರಿ ಸಂತೋಷ್ ಶುಕ್ಲಾ ಅವರು ತಿಳಿಸಿದ್ದು, ಶೀಘ್ರವೇ ಐಸಿಎ ಅಧಿಕಾರಿಗಳು ನವದೆಹಲಿಯ ಇಫ್ಕೋ ಸಂಸ್ಥೆಗೆ ಭೇಟಿ ನೀಡಿ ತಿಳುವಳಿಕೆ ಪತ್ರಕ್ಕೆ ಸಹಿ ಹಾಕಲಿದ್ದಾರೆ ಎಂದು ತಿಳಿಸಿದ್ದಾರೆ. ನವೆಂಬರ್ 25 ರಿಂದ 30, 2024 ರವರೆಗೆ ನಡೆಯಲಿರುವ ಸಮ್ಮೇಳನದಲ್ಲಿ ಜಗತ್ತಿನ 100 ರಾಷ್ಟ್ರಗಳ 1000 ಸಾವಿರ ಸಹಕಾರಿ ಮುಖಂಡರುಗಳನ್ನು ಒಂದೆಡೆ ಸೇರಿಸಿ, ಅಂತಾರಾಷ್ಟ್ರೀಯ ಸಹಕಾರ ವರ್ಷದ ಕುರಿತು ಯೋಜನೆಗಳನ್ನು ರೂಪಿಸಲು ಈ ಸಮ್ಮೇಳನ ಸಹಕಾರಿಯಾಗಲಿದೆ, ಇದೇ ಸಂದರ್ಭದಲ್ಲಿ ಸಹಕಾರ ಸಂಸ್ಥೆಗಳ ಅಂತಾರಾಷ್ಟ್ರೀಯ ಪ್ರದರ್ಶನ ಮತ್ತು 21ನೇ ಶತಮಾನದಲ್ಲಿ ಸಹಕಾರಿಗಳ ನಡುವಿನ ಸಹಕಾರವನ್ನು ಕೇಂದ್ರೀಕರಿಸುವ ವಿವಿಧ ವಿಷಯಾಧಾರಿತ ಸಭೆಗಳನ್ನು ನವದೆಹಲಿಯ ಭಾರತ್ ಮಂಟಪ್ ಸಭಾಂಗಣದಲ್ಲಿ ಆಯೋಜಿಸಲಾಗುವುದು ಎಂದು ಶುಕ್ಲಾ ತಿಳಿಸಿದ್ದಾರೆ. ನವೆಂಬರ್‌ನಲ್ಲಿ ನಡೆಯುವ ಜಾಗತಿಕ ಸಮ್ಮೇಳನ ಮತ್ತು ಜನರಲ್ ಅಸೆಂಬ್ಲಿಯು ಸಮಕಾಲೀನ ಸವಾಲುಗಳನ್ನು ಎದುರಿಸುವಲ್ಲಿ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ಸಹಕಾರಿಗಳ ನಡುವಿನ ಸಹಕಾರದ ಪ್ರಾಮುಖ್ಯತೆಯನ್ನು ಪ್ರದರ್ಶಿಸುವ ಪ್ರಮುಖ ಘಟನೆಗಳಾಗಲಿವೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

**ಸುಭಾಷಿತ :** ಮಾತೃಭಾಷೆ ಮಕ್ಕಳಿಗೆ ನೀಡುವ ಪ್ರತಿಭಾ ವಿಲಾಸವನ್ನು ನಾವು ಅರಿತುಕೊಂಡಿಲ್ಲ, ನಮ್ಮ ಶಿಕ್ಷಣದಲ್ಲಿ ಪರೀಕ್ಷೆಗೆ ಸಿಗುವ ಪ್ರಾಮುಖ್ಯತೆ ಕಲಿಕೆಗೆ ಸಿಗುತ್ತಿಲ್ಲ – ಚಂದ್ರಶೇಖರ ಕಂಬಾರ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1770/-


**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.


# 2024ರ ಲೋಕಸಭಾ ಚುನಾವಣೆಯ ಮತದಾನ ಉತ್ತಮ ಪ್ರಜಾಪ್ರಭುತ್ವದ ಬುನಾದಿಗೆ ವರದಾನ



ಲಕ್ಷ್ಮೀಪತಯ್ಯ
ಸಹಕಾರ ಸಂಘಗಳ ಜಂಟಿ ನಿಬಂಧಕರು
ಹಾಗೂ ಕಾರ್ಯದರ್ಶಿ,
ಕರ್ನಾಟಕ ರಾಜ್ಯ ಸಹಕಾರ
ಮಹಾಮಂಡಳ ನಿ., ಬೆಂಗಳೂರು





ಭಾರತವು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ. ಇಂದು ಭಾರತ ಯಶಸ್ವಿ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಹೊರಹೊಮ್ಮುತ್ತಿರುವುದು ಪ್ರಜೆಗಳೇ ಪ್ರಭುಗಳು ಆಗಿರುವುದರಿಂದ. ಪ್ರಜೆಗಳೇ ಪ್ರಭುಗಳು ಆಗಿರುವುದು ಮತದಾನದಿಂದ, ಜನತಂತ್ರಗಳ ಚುನಾವಣೆಯಲ್ಲಿ ಮತದಾನ ಪ್ರಮುಖ ಅಂಗವಾಗಿದೆ. ಮತದಾನ ಮಾಡುವುದು ಪ್ರತಿಯೊಬ್ಬ ಭಾರತೀಯನ ಹಕ್ಕಾಗಿದೆ. ಬಡತನ ನಿರ್ಮೂಲನೆ, ಉದ್ಯೋಗಸೃಷ್ಟಿ, ಉತ್ತಮ ಸಮಾಜ ನಿರ್ಮಾಣ, ಸಮಾನತೆ ಇವು ಭಾರತದಂತಹ ದೇಶದಲ್ಲಿ ಮಾಡಬೇಕಾದರೆ ಮತದಾರರ ಪಾತ್ರ ಪ್ರಮುಖವಾಗಿದೆ. ಈ ಹಿನ್ನಲೆಯಲ್ಲಿ ಪ್ರತಿಯೊಬ್ಬರು ತಪ್ಪದೇ ತಮ್ಮ ಅಮೂಲ್ಯವಾದ ಮತದಾನ ಮಾಡುವುದು ದೇಶದ ಅಭ್ಯುದಯಕ್ಕೆ ಅಗತ್ಯ ಹಾಗೂ ಪ್ರತಿಯೊಬ್ಬ ನಾಗರಿಕನ ಕರ್ತವ್ಯವೂ ಆಗಿದೆ.

ದೇಶದ 543 ಕ್ಷೇತ್ರಗಳಿಗೆ 2024ರ ಸಾರ್ವತ್ರಿಕ ಲೋಕಸಭಾ ಚುನಾವಣೆ ಏಳು ಹಂತಗಳಲ್ಲಿ ನಡೆಯಲಿದ್ದು, ಕರ್ನಾಟಕ ರಾಜ್ಯದಲ್ಲಿ ಮೊದಲ ಹಂತದಲ್ಲಿ 14 ಲೋಕಸಭಾ ಕ್ಷೇತ್ರಗಳಲ್ಲಿ ಏಪ್ರಿಲ್ 26 ರಂದು ಹಾಗೂ ಎರಡನೇ ಹಂತದಲ್ಲಿ 14 ಲೋಕಸಭಾ ಕ್ಷೇತ್ರಗಳಲ್ಲಿ ಮೇ 7 ರಂದು ಚುನಾವಣೆ ನಡೆಯಲಿದೆ. ಜೂನ್ 4 ರಂದು ಚುನಾವಣಾ ಫಲಿತಾಂಶ ಪ್ರಕಟವಾಗಲಿದೆ. ಪ್ರತಿಯೊಬ್ಬ ಮತದಾರರು ಮತದಾನದ ಮಹತ್ವ ತಿಳಿದುಕೊಂಡು ತಪ್ಪದೆ ಮತದಾನ ಮಾಡಬೇಕು ಎಂಬುದು ನಮ್ಮೆಲ್ಲರ ಆಶಯವಾಗಿದೆ.

**ಕರ್ನಾಟಕದಲ್ಲಿ ಪ್ರಸ್ತುತ 5,42,54,500 ಮತದಾರರಿದ್ದು, ಇದರಲ್ಲಿ 2,71,66,200 ಪುರುಷರು ಮತ್ತು 2,70,88,300 ಮಹಿಳೆಯರಿದ್ದಾರೆ. ಕೆಲವೇ ಸಂಖ್ಯೆಯಲ್ಲಿ ತೃತೀಯ ಲಿಂಗಿಗಳೂ ಇದ್ದಾರೆ. ಪ್ರಸ್ತುತ ಸಂದರ್ಭದಲ್ಲಿ ಮಹಿಳಾ ಮತದಾರರು ಮತದಾನದಲ್ಲಿ ಪಾಲ್ಗೊಳ್ಳುತ್ತಿರುವುದು ಹೆಚ್ಚುತ್ತಿದೆ. 1999ರಲ್ಲಿ ದಾಖಲಾದ ಮಹಿಳೆಯರ ಮತದಾನ ಪ್ರಮಾಣ ಶೇಕಡ 51, 2004ರಲ್ಲಿ ಶೇಕಡ 53, 2009ರಲ್ಲಿ ಶೇಕಡ 55, 2014ರಲ್ಲಿ ಶೇಕಡ 65, 2019ರಲ್ಲಿ ಶೇಕಡ 67, 24ರ ಒಟ್ಟು ಮತದಾರರು 47ರಷ್ಟು. ಮೊದಲ ಸಲದ ಮಹಿಳಾ ಮತದಾರರು (18 ರಿಂದ 19ವರ್ಷದೊಳಗಿನ) 85.3ಲಕ್ಷ ಆಗಿರುತ್ತಾರೆ.**

**ರಾಜ್ಯದ ಅತಿ ಹೆಚ್ಚು ಮತದಾರರು ಇರುವ ಲೋಕಸಭಾ ಕ್ಷೇತ್ರ ಬೆಂಗಳೂರು ಉತ್ತರ – 31,74,098, ಅತಿ ಕಡಿಮೆ ಮತದಾರರು ಇರುವ ಲೋಕಸಭಾ ಕ್ಷೇತ್ರ ಉಡುಪಿ–ಚಿಕ್ಕಮಗಳೂರು**

**– 15,72,958. ರಾಜ್ಯದ ಒಟ್ಟು ಮತಗಟ್ಟೆಗಳು 58834 ಇದ್ದು, ಅದರಲ್ಲಿ ನಗರ ಪ್ರದೇಶದಲ್ಲಿ 21595, ಗ್ರಾಮೀಣ ಪ್ರದೇಶದಲ್ಲಿ 37239 ಮತಗಟ್ಟೆಗಳಿವೆ. ಅತ್ಯಂತ ಹೆಚ್ಚು ಮತಗಟ್ಟೆಗಳು ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರ – 2911 ಹಾಗೂ ಅತ್ಯಂತ ಕಡಿಮೆ ಮತಗಟ್ಟೆಗಳು ಇರುವ ಲೋಕಸಭಾ ಕ್ಷೇತ್ರ ಉಡುಪಿ–ಚಿಕ್ಕಮಗಳೂರು ಇಲ್ಲಿ ಒಟ್ಟು 1842 ಮತಗಟ್ಟೆಗಳಿವೆ. ರಾಜ್ಯದಲ್ಲಿ ಒಟ್ಟು 3 ಲಕ್ಷ ಸಿಬ್ಬಂದಿಗಳು ಚುನಾವಣಾ ಕಾರ್ಯ ನಿರ್ವಹಿಸಲಿದ್ದಾರೆ.**

ಇಂದಿನ ತಂತ್ರಜ್ಞಾನ ಯುಗದಲ್ಲಿ ಮತದಾರರಿಗೆ ಮತದಾನ ಮಾಡಲು ಚುನಾವಣಾ ಆಯೋಗವು ಮತದಾರರ ಸಹಾಯಕ್ಕೆ ಹಲವು ಆ್ಯಪ್‌ಗಳನ್ನು ಅಭಿವೃದ್ಧಿಪಡಿಸಿದೆ.

01. 1950 ಸಹಾಯವಾಣಿ – ಚುನಾವಣೆಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಹಾಗೂ ಉಚಿತ ಸಹಾಯವಾಣಿ ಒದಗಿಸುತ್ತದೆ.
02. ವೋಟರ್ ಹೆಲ್ಪ್ ಲೈನ್ ಆ್ಯಪ್– ಹೊಸ ಮತದಾರರು ನೊಂದಣಿ, ತಿದ್ದುಪಡಿ ಮಾಡುವುದು.
03. ಸಕ್ಷಮ ಆ್ಯಪ್ – ವಿಕಲಾಂಗರಿಗೆ ಮತ ಚಲಾಯಿಸಲು ನೊಂದಣಿ ಮಾಡುವುದಕ್ಕೆ ಸಹಾಯಕಾರಿಯಾಗಿದೆ.
04. ಸಕ್ಷಮ ಆ್ಯಪ್ – ವಿಶೇಷ ಚೇತನ ಮತ್ತು ಹಿರಿಯ ನಾಗರೀಕರಿಗೆ ಉಚಿತ ಸಹಾಯವಾಣೀ ನೀಡುವುದು.
05. ವಿ.ಹೆಚ್.ಎ. ಪ್ರತಿಯೊಬ್ಬ ಮತದಾರರು ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ಪರಿಶೀಲಿಸಿಕೊಳ್ಳಲು ಸಹಾಯಕಾರಿಯಾಗಿದೆ.

ಜಗತ್ತಿನ 36 ಪ್ರಜಾಪ್ರಭುತ್ವ ದೇಶಗಳಲ್ಲಿ ಅತಿ ಹೆಚ್ಚು ಮತದಾರರು ಇರುವ ದೇಶ ಭಾರತ. ಈ ಹಿನ್ನಲೆಯಲ್ಲಿ ಭಾರತದ ಮತದಾರರ ಬಗ್ಗೆ ಇಡೀ ವಿಶ್ವದ ಗಮನವಿದೆ. ನಮ್ಮ ದೇಶದ ಉತ್ತರ ರಾಜ್ಯ ಹಿಮಾಚಲ ಪ್ರದೇಶ ಒಂದು ಗ್ರಾಮವು 15256 ಅಡಿ ಎತ್ತರದಲ್ಲಿದ್ದು ಈ ಸ್ಥಳದಲ್ಲಿಯೂ ಮತಗಟ್ಟೆ ಸ್ಥಾಪಿತವಾಗಬೇಕಾಗಿದೆ. ಅಂಡಮಾನ್ ನಿಕೋಬಾರ್ ದ್ವೀಪದಲ್ಲಿ ಮೊಸಳೆಗಳು ಇದ್ದು, ಅಲ್ಲಿಯ ಜನರು ಮತದಾನದಿಂದ ವಂಚಿತರಾಗಬಾರದೆಂದು ಅಲ್ಲಿಯೂ ಮತಗಟ್ಟೆ ಸ್ಥಾಪಿಸಲಾಗಿದೆ. ಒಡಿಶಾದ ಮಲ್ಕಾನಗರಿ ಜಿಲ್ಲೆಯ ಒಂದು ಹಳ್ಳಿಯಲ್ಲಿ ಮತಗಟ್ಟೆ ಸ್ಥಾಪಿಸಲಾಗಿದೆ ಇಲ್ಲಿ ಸುಮಾರು 9 ಮೈಲು ಕಾಡಿನಲ್ಲಿ ನಡೆದುಕೊಂಡು ಹೋಗಬೇಕಾಗಿದೆ. ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಪ್ರತಿ ನಾಗರಿಕರು ಮತದಾನದಿಂದ ವಂಚಿತನಾಗಬಾರದೆಂದು ಚುನಾವಣಾ ಆಯೋಗವು ವಿಶೇಷ ಕಾಳಜಿ ವಹಿಸಿರುವುದನ್ನು ಪ್ರತಿಯೊಬ್ಬ ಮತದಾರರು ತಿಳಿದುಕೊಳ್ಳಬೇಕಾಗಿದೆ. ಅದೇ ರೀತಿಯಲ್ಲಿ ಪ್ರತಿಯೊಬ್ಬ ಮತದಾರರು ಮತದಾನದ ಮಹತ್ವವನ್ನು ಇತಿಹಾಸದ ಪುಟಗಳಿಂದ ತಿಳಿಯಬೇಕಾಗಿದೆ. ಒಂದು ಮತದ ಪ್ರಾಮುಖ್ಯತೆ ತಿಳಿಯಬೇಕಾದರೆ 2008ರಲ್ಲಿ ರಾಜಸ್ಥಾನದ ವಿಧಾನಸಭಾ ಚುನಾವಣೆಯಲ್ಲಿ ಅಭ್ಯರ್ಥಿ ಸಿ.ವಿ. ಜೋಶಿ ಎಂಬುವವರು ಒಂದು ಮತದಿಂದ ಸೋತರು. ಅಂದಿನ ಮತದಾನದಲ್ಲಿ ಜೋಶಿಯವರ ತಾಯಿಯೇ ಮತದಾನ ಮಾಡಿರಲಿಲ್ಲ. ಅವರ ತಾಯಿ ಮತದಾನ ಮಾಡದಿರುವುದರಿಂದ ಸಿ.ವಿ. ಜೋಶಿ





ಚುನಾವಣೆಯಲ್ಲಿ ಸೋಲಬೇಕಾಯಿತು. ಗುಜರಾತಿನ ಗೀರ್ ಅರಣ್ಯ ಪ್ರದೇಶದಲ್ಲಿ ವಾಸಿಸುವ ಒಬ್ಬ ವ್ಯಕ್ತಿ ಆತನ ಹೆಸರು ಎಂ. ಭಾರತ್ ದಾಸ್ ಈತನ ಒಂದು ಓಟಿನ ಮತದಾನಕ್ಕಾಗಿಯೇ 5 ಜನ ಅಧಿಕಾರಿಗಳನ್ನು ಮತಯಂತ್ರ ಇಟ್ಟು ಬೆಳಗ್ಗೆಯಿಂದ ಸಂಜೆಯವರೆಗೆ ನಿಯೋಜಿಸುತ್ತಿದೆ. ಇದರಿಂದ ಅರ್ಥವಾಗುವುದು ಮತದಾನ ಮಾಡುವುದು ಎಷ್ಟು ಮುಖ್ಯ ಎನ್ನುವುದು. ಇಂದು ಮತದಾನದ ದಿನ ರಜೆ ನೀಡಿದರೆ ಗ್ರಾಮೀಣ ಭಾಗದ ಜನರು ಮತದಾನ ಮಾಡಲು ಬಳಸಿದರೆ, ನಗರ ಪ್ರದೇಶದ ಸುಶಿಕ್ಷಿತ ಜನರು ಮತದಾನ ದಿನದ ರಜೆಯನ್ನು ಪ್ರವಾಸ ಮಾಡಲು ಬಳಸುತ್ತಾರೆ. ಈ ಹಿನ್ನಲೆಯಲ್ಲಿ ಪ್ರತಿಯೊಬ್ಬರು ಮತದಾನ ಮಾಡಲು ಜವಾಬ್ದಾರಿ ಹಾಗೂ ಬದ್ಧತೆಯೊಂದಿಗೆ ಪ್ರಮಾಣ ಮಾಡಬೇಕು.

- ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ಮತದಾರರು ಮತದಾನದ ಸಂದರ್ಭದಲ್ಲಿ ಅವಶ್ಯಕವಾಗಿರುವ ಗುರುತಿನ ಚೀಟಿಯ ದಾಖಲೆಗಳೊಂದಿಗೆ ಮತಗಟ್ಟೆಗೆ ತೆರಳಿ ಅಮೂಲ್ಯವಾದ ಮತ ಚಲಾಯಿಸುವುದು.
- ಮತ ಮಾರಾಟದ ವಸ್ತುವಲ್ಲ. ಮತ ಪವಿತ್ರವೆಂದು ಅರಿಯಬೇಕು.
- ಯುವಜನರು, ಮಹಿಳೆಯರು, ಹಿರಿಯ ನಾಗರಿಕರು, ಅಂಗವಿಕಲರಿಗೆ ಮತದಾನದ ಬಗ್ಗೆ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ.
- ಪ್ರತಿಯೊಬ್ಬರ ಮನೆಯಲ್ಲಿ ಮತದಾನ ಮಾಡುವಂತೆ ಒಬ್ಬರಿಗೊಬ್ಬರು ಮನವರಿಕೆ ಮಾಡಿಕೊಳ್ಳುವ ಕೆಲಸವಾಗಬೇಕು.

ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಹಿರಿಯ ನಾಗರಿಕರು, ಅಂಗವಿಕಲರು ಮನೆಯಿಂದಲೇ ಮತದಾನ ಮಾಡಲು ಅವಕಾಶ ಕಲ್ಪಿಸಲಾಗಿದೆ. ತೃತೀಯ ಲಿಂಗೀಯರು ಅವರು ಬಯಸಿದಂತೆ ಹೆಣ್ಣು, ಗಂಡು ಎಂದು ನಮೂದಿಸಲು ಅವಕಾಶವಿದೆ.

### ಭಾರತದಲ್ಲಿ ರಾಷ್ಟ್ರೀಯ ಮತದಾರರ ದಿನ

ಭಾರತದಲ್ಲಿ ರಾಷ್ಟ್ರೀಯ ಮತದಾರರ ದಿನವನ್ನು ಪ್ರತಿ ವರ್ಷ ಜನವರಿ 25ರಂದು ಆಚರಿಸಲಾಗುತ್ತಿದೆ. ಪ್ರತಿಯೊಬ್ಬ ಮತದಾರರು ಸಕ್ರಿಯವಾಗಿ ಮತದಾನವನ್ನು ಚಲಾಯಿಸಲು ಹೆಚ್ಚಿನ ಮತದಾರರನ್ನು ಉತ್ತೇಜಿಸಲು ಪ್ರಾರಂಭಿಸಲಾಗಿದೆ. ಈ ವಿಶೇಷ ದಿನವನ್ನು ಮೊದಲ ಬಾರಿಗೆ ಜನವರಿ 25 2011ರಲ್ಲಿ ಭಾರತದಲ್ಲಿ ವಸ್ತುನಿಷ್ಠ ಮತ್ತು ನ್ಯಾಯಸಮ್ಮತವಾದ ಚುನಾವಣೆ ನಡೆಸಲು ನಿರ್ಣಾಯಕ ಪಾತ್ರ ವಹಿಸುವ ಭಾರತದ ಚುನಾವಣಾ ಆಯೋಗದ ಸಂಘಟನಾ ದಿನವನ್ನಾಗಿ ಆಚರಿಸಲು ನಿರ್ಧರಿಸಲಾಯಿತು.

ಭಾರತದಲ್ಲಿ ಪ್ರಜಾಪ್ರಭುತ್ವದ ಬುನಾದಿ "ಮತದಾನ." ಭಾರತದಲ್ಲಿ ಪ್ರತಿಯೊಬ್ಬ ನಾಗರೀಕರು ಮತದಾನದಲ್ಲಿ ಭಾಗವಹಿಸಲು ಮತ್ತು ಜವಾಬ್ದಾರಿಯನ್ನು ಹೊಂದಲು ಮತದಾನ ಮಾಡುವುದು ಅವಶ್ಯಕವಾಗಿದೆ.




ಮಹಾಮಂಡಳದ ಕಾರ್ಯದರ್ಶಿ ಹಾಗೂ ಜಂಟಿ ನಿಬಂಧಕ ಲಕ್ಷ್ಮೀಪತಯ್ಯ ಅವರು ಮತದಾನದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಚಿತ್ರಣ

ಈ ಮೂಲಕ ನಾವು ನಮ್ಮ ರಾಷ್ಟ್ರದ ಭವಿಷ್ಯವನ್ನು ರೂಪಿಸಲು ಸಕ್ರಿಯವಾಗಿ ಕೊಡುಗೆ ನೀಡಬಹುದು ಮತ್ತು ಜವಾಬ್ದಾರಿಯುತ ನಾಗರಿಕರಾಗಿ ಬಾಳಲು ಅರ್ಹರಾಗುತ್ತಾರೆ. ಮತದಾನ ನಮ್ಮ ರಾಷ್ಟ್ರದ ಭವಿಷ್ಯದ ದೃಷ್ಟಿಯಿಂದ ಅತ್ಯಂತ ಅಮೂಲ್ಯವಾದುದಾಗಿದೆ. ಆದ್ದರಿಂದ ಪ್ರತಿಯೊಬ್ಬರು ತಮ್ಮ ಅಮೂಲ್ಯ ಮತವನ್ನು ಜವಾಬ್ದಾರಿಯುತವಾಗಿ ಚಲಾಯಿಸಿ, ರಾಷ್ಟ್ರದ ಅಭಿವೃದ್ಧಿಗೆ ಸಹಕರಿಸಿ.

## ಮತದಾನದ ಬಗ್ಗೆ ಜಾಗೃತಿ

ರಾಜ್ಯದ 5661 ಮತಗಟ್ಟೆಯಲ್ಲಿ ಶೇ.50ಕ್ಕಿಂತ ಹೆಚ್ಚು ಮತದಾನವಾಗುತ್ತಿಲ್ಲ, ಇದರಲ್ಲಿ ಬೆಂಗಳೂರು ಹಾಗೂ ಮಂಗಳೂರು ನಗರ ಭಾಗದ ಮತದಾರರೇ ಹೆಚ್ಚಿದ್ದಾರೆ ಎನ್ನುವ ಅಂಶವನ್ನು ರಾಜ್ಯ ಸ್ವೀಪ್ ಸಮಿತಿ ಬಹಿರಂಗಪಡಿಸಿದೆ. 2019ರ ಲೋಕಸಭೆ ಚುನಾವಣೆ ಹಾಗೂ 2023ರ ವಿಧಾನಸಭೆ ಚುನಾವಣೆಯ ಲೆಕ್ಕಾಚಾರ ಪ್ರಕಾರ 5 ಸಾವಿರಕ್ಕೂ ಹೆಚ್ಚು ಮತಗಟ್ಟೆಗಳಲ್ಲಿ ಮತದಾನ ಕಡಿಮೆಯಾಗುತ್ತಿದ್ದು, ಇಲ್ಲಿ ಈ ಬಾರಿಯಾದರೂ ಮತದಾನ ಪ್ರಮಾಣ ಹೆಚ್ಚಳ ಮಾಡಲು ಸ್ವೀಪ್ ಸಮಿತಿ ಹೊಸ ಟ್ರೀಟ್‌ಮೆಂಟ್‌ಗೆ ಮುಂದಾಗಿದೆ.

ಮತದಾನ ಕಡಿಮೆಯಾಗಿರುವ ರಾಜ್ಯದ ಮತಗಟ್ಟೆಯಲ್ಲಿ ವೋಟರ್ಸ್ ಗೈಡ್ ಹಾಗೂ ಮತದಾರ ಚೀಟಿ ನೀಡುವ ವೇಳೆ ಬಿಎಲ್‌ಒಗಳ ಜತೆ ತಂಡವಾಗಿ ಅಧಿಕಾರಿಗಳು ಆ ಭಾಗದ ಪ್ರತಿ ಮನೆಗೂ ಹೋಗಿ ಐದು ನಿಮಿಷವಾದರೂ ಮತದಾನದ ಕುರಿತು ಮಾಹಿತಿ ನೀಡಿ, ಜಾಗೃತಿ ಮೂಡಿಸುವ ಕೆಲಸ ಮಾಡಲಿದ್ದಾರೆ.

ಏ. 21 ರಿಂದ ಮತದಾರರಿಗೆ ಮತಗಟ್ಟೆಯ ಪರಿಚಯ ಮಾಡಲು ಧ್ವಜಾರೋಹಣ ಕಾರ್ಯಕ್ರಮಗಳನ್ನು ಬಿಎಲ್‌ಒಗಳಿಂದ ಮಾಡಿಸಲಾಗುತ್ತಿದೆ. ಆ್ಯಪ್‌ಗಳಿಂದ ಮತಗಟ್ಟೆಯ ಚಿತ್ರಣ ನೀಡುವ ಜತೆಗೆ ಪ್ರತ್ಯೇಕವಾಗಿ ಮತಗಟ್ಟೆಯಲ್ಲಿ ವಿಶ್ರಾಂತಿ ಪಡೆಯಲು ವ್ಯವಸ್ಥೆ ಮಾಡುವ ಯೋಜನೆ ಕೈಗೆತ್ತಿಕೊಳ್ಳಲಾಗಿದೆ.

ಮಹಿಳಾ ಮತದಾರರನ್ನು ಸೆಳೆಯಲು ಚುನಾವಣಾ ಆಯೋಗ ವಿಶೇಷವಾಗಿ ಸಖಿ ಬೂತ್ ಸ್ಥಾಪನೆ ಸೇರಿದಂತೆ ನಾನಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಹಿಳಾ ಮತದಾರರ ಸೆಳೆಯುವ ಪ್ರಯತ್ನ ಮಾಡುತ್ತಿದೆ. ಆದರೆ, ನಿರೀಕ್ಷಿತ ಪ್ರಮಾಣದಲ್ಲಿ ಯಶಸ್ಸು ಸಿಗದೇ ಇರುವುದು ಸಮಸ್ಯೆಯಾಗಿದೆ.

ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ನಡೆಯುವ ಚುನಾವಣಾ ಹಬ್ಬದ ರಥ ಎಳೆಯುವ ಅವಕಾಶ ದಶಕದಿಂದ ಸಿಕ್ಕರೂ ಈ ನಿಟ್ಟಿನಲ್ಲಿ ಕೈ ಜೋಡಿಸಿದ ಸಾಗರೋತ್ತರ/ಅನಿವಾಸಿ ಭಾರತೀಯ (ಓವರ್‌ಸೀಸ್, ಎನ್‌ಆರ್‌ಐ) ಪ್ರಮಾಣ ಶೇ. 1ಕ್ಕಿಂತಲೂ ಕಡಿಮೆಯಿದೆ. ಭಾರತೀಯ ಪ್ರಜಾಪ್ರತಿನಿಧಿ ಕಾಯಿದೆಗೆ 2010ರಲ್ಲಿ ತಿದ್ದುಪಡಿ ಮೂಲಕ ಎನ್‌ಆರ್‌ಐ ಗಳಿಗೆ ಮತದಾರರ ಪಟ್ಟಿ ಸೇರಿ ಮತ ಚಲಾಯಿಸುವ ಹಕ್ಕು ನೀಡಲಾಗಿದೆ.

ಈ ಹಿನ್ನೆಲೆಯಲ್ಲಿ ಸಹಕಾರ ಕ್ಷೇತ್ರದ ಪ್ರತಿಯೊಂದು ಸಹಕಾರಿ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯ್ತಿಗಳು, ನಗರಸಭೆಗಳು ಮತದಾನ ಮಾಡಲು ಸದಸ್ಯರುಗಳಲ್ಲಿ, ನಾಗರೀಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕಾಗಿದೆ. ನಾನೂ ಸಹ ಸಹಕಾರ ಇಲಾಖೆಯ ಅಧಿಕಾರಿಯಾಗಿ, ಭಾರತದ ಪ್ರಜೆಯಾಗಿ ಮತದಾನ ಮಾಡಲು ಜಾಗೃತಿ ಮೂಡಿಸುವ ಕೆಲಸ ಮಾಡುವುದರ ಜೊತೆಗೆ ಕಡ್ಡಾಯ ಮತದಾನ ಮಾಡುತ್ತೇನೆ. ತಾವು ಸಹ ಮತದಾನದ ಜಾಗೃತಿ ಮೂಡಿಸುವುದರ ಜೊತೆಗೆ ಕಡ್ಡಾಯವಾಗಿ ಮತದಾನ ಮಾಡಬೇಕೆಂಬುದೇ ಎಲ್ಲರ ಆಶಯವಾಗಿದೆ.

# ಕಾರ್ಮಿಕರ ದಿನಾಚರಣೆ : ಬೃಹತ್ ಕಾರ್ಮಿಕ ಶಕ್ತಿಯೇ ಭಾರತ ಬೆನ್ನೆಲುಬು



**2050ರ ಬಳಿಕ ದುಡಿಯುವ ವರ್ಗದ ಪ್ರಮಾಣ ಕಡಿಮೆಯಾಗಲಿದೆ. ಇದು ಪ್ರಸಕ್ತ ಯುರೋಪ್ ಎದುರಿಸುತ್ತಿರುವ ದುಡಿಯುವ ವರ್ಗದ ಕಡಿಮೆ ಅನುಪಾತಕ್ಕೆ ತಾಳೆಯಾಗಲಿದೆ. ಭವಿಷ್ಯದಲ್ಲಿ ಇದು ದೇಶದ ಆರ್ಥಿಕತೆ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಈ ಬಗ್ಗೆ ಆರ್ಥಿಕ ತಜ್ಞರು ಚಿಂತನೆ ನಡೆಸಬೇಕಿದೆ. ಸಾಮಾನ್ಯವಾಗಿ ದುಡಿಯುವ ವರ್ಗದ ಜನರಲ್ಲಿ 40-45 ವರ್ಷದವರೆಗೆ ಹೆಚ್ಚಿನ ಉಳಿತಾಯ ಇರುತ್ತದೆ. ಬಳಿಕ ಉಳಿತಾಯದ ಪ್ರಮಾಣ ಕಡಿಮೆಯಾಗುತ್ತದೆ. ಯುರೋಪ್ ದೇಶಗಳಲ್ಲಿ ಬಹುತೇಕ 60 ವರ್ಷದ ಬಳಿಕ ದುಡಿಮೆ ನಿಂತು ಹೋಗುತ್ತದೆ. ಆದರೆ ಭಾರತದಲ್ಲಿ ಬಹುತೇಕ ಜನರು ಕೃಷಿಯನ್ನು ಅವಲಂಬಿಸಿರುವ ಕಾರಣ ದುಡಿಮೆ 80-90 ವರ್ಷದವರೆಗೂ ಇರುತ್ತದೆ.**

ವಿಶ್ವದಾದ್ಯಂತ ಮೇ ಒಂದರಂದು ಕಾರ್ಮಿಕ ದಿನಾಚರಣೆ ಆಚರಿಸಲಾಗುತ್ತದೆ. ಜಗತ್ತು ಇಂದು ಇಷ್ಟೊಂದು ವೇಗವಾಗಿ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿಹೊಂದಲು ವಿಜ್ಞಾನ ತಂತ್ರಜ್ಞಾನದ ಕೊಡುಗೆಯ ಜೊತೆಗೆ ಕಾರ್ಮಿಕ ಸಮುದಾಯದ ಕೊಡುಗೆ ಅಪಾರವಾದದ್ದು. ಇಂದು ವಿವಿಧ ಕ್ಷೇತ್ರದಲ್ಲಿ ಕೌಶಲ್ಯಹೊಂದಿದ ಕಾರ್ಮಿಕರಿಗೆ ಜಗತ್ತಿನಾದ್ಯಂತ ಅಪಾರ ಬೇಡಿಕೆ ಇದೆ. ಮುಂದುವರಿದ ಎಷ್ಟೋ ರಾಷ್ಟ್ರಗಳು ಕೌಶಲ್ಯ ಹೊಂದಿದ ಕಾರ್ಮಿಕರ ಕೊರತೆ ಎದುರಿಸುತ್ತಿದ್ದು ಇದು ಆ ದೇಶಗಳ ಅಭಿವೃದ್ಧಿಯ ಮೇಲೆ ಅಡ್ಡ ಪರಿಣಾಮ ಬೀರಿದೆ.

ಕಾರ್ಮಿಕರು ಹಗಲು ರಾತ್ರಿ ನೋಡುವುದಿಲ್ಲ, ಬಿಸಿಲು ಮಳೆ ಗಾಳಿಗೂ ಜಗ್ಗುವುದಿಲ್ಲ, ಕಠಿಣ ಪರಿಶ್ರಮ, ಸಮರ್ಪಣಾ ಭಾವಕ್ಕೆ ಇವರು ಸಾಕ್ಷಿ... ಕಷ್ಟವನ್ನು ನುಂಗಿ ಖುಷಿ ಹಂಚುವವರು ಕಾರ್ಮಿಕರು... ದೇಶ ಕಟ್ಟುವಲ್ಲಿ ಕಾರ್ಮಿಕರ ಪಾತ್ರ ಬಹಳ ಹಿರಿದು. ಕಾರ್ಮಿಕರ ಶ್ರಮದಲ್ಲಿ ದೇಶದ ಅಭಿವೃದ್ಧಿಯಡಗಿದೆ... ಈ ಶ್ರಮಜೀವಿಗಳೇ ಇಲ್ಲದ ದೇಶವನ್ನು ಊಹಿಸಲು ಸಾಧ್ಯವಿದೆಯೇ...? ಖಂಡಿತಾ ಇಲ್ಲ. ತಮ್ಮ ದುಡಿಮೆಯಿಂದಲೇ ತಮ್ಮ ಕುಟುಂಬವನ್ನು ಮುನ್ನಡೆಸುವ ಕಾರ್ಮಿಕರು ತಾವು ದುಡಿಯುತ್ತಿರುವ ಸಂಸ್ಥೆಯ ಬೆಳವಣಿಗೆಗೂ ಕಾರಣವಾಗುತ್ತಾರೆ.

ಇಂತಹ ಶ್ರಮಜೀವಿಗಳ ಕೆಲಸವನ್ನು ಗೌರವಿಸುವ, ಇವರ ಶ್ರಮವನ್ನು ಗುರುತಿಸುವ, ಇವರ ಕಷ್ಟಗಳನ್ನು ಸ್ಮರಿಸುವ ಸಲುವಾಗಿ ಮೇ 1 ರಂದು ಅಂತಾರಾಷ್ಟ್ರೀಯ ಕಾರ್ಮಿಕರ ದಿನ ಎಂದು ಆಚರಿಸಲಾಗುತ್ತದೆ. ಇದನ್ನು ವರ್ಕರ್ಸ್ ಡೇ, ಮೇ ಡೇ, ಲೇಬರ್ ಡೇ ಎಂದೂ ಕರೆಯಲಾಗುತ್ತದೆ. 1886ರಲ್ಲಿ ಅಮೇರಿಕಾದಲ್ಲಿ ಮೊದಲ ಬಾರಿಗೆ ಕಾರ್ಮಿಕರ ದಿನವನ್ನು ಆಚರಿಸಲಾಯಿತು. ದಿನಕ್ಕೆ ಕಾರ್ಮಿಕರಿಗೆ ಎಂಟು ಗಂಟೆ ಕೆಲಸದ ಅವಧಿಯನ್ನು ನಿಗದಿ ಮಾಡಬೇಕು ಎಂಬ ಆಗ್ರಹದೊಂದಿಗೆ ಶುರುವಾದ ಚಳವಳಿಗೆ ಯಶಸ್ಸು ಸಿಕ್ಕಿತ್ತು. ಇದೇ ಹೋರಾಟದ ಕಿಚ್ಚಿನಲ್ಲಿ ಉದಯಿಸಿದ್ದೇ ಕಾರ್ಮಿಕರ ದಿನಾಚರಣೆ. ಭಾರತದಲ್ಲಿ ಈ ಆಚರಣೆ ಶುರುವಾಗಿದ್ದು 1923ರಲ್ಲಿ. ವಿಶ್ವದ ನಾನಾ ಭಾಗಗಳಲ್ಲಿ ಕಾರ್ಮಿಕರ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಈ ಮೂಲಕ ಶ್ರಮಜೀವಿಗಳಿಗೆ ಕೃತಜ್ಞತೆ ಸಲ್ಲಿಸಲಾಗುತ್ತದೆ. ಹೀಗಾಗಿ, ಈ ದಿನದಂದು ಎಲ್ಲಾ ಶ್ರಮಜೀವಿಗಳಿಗೆ ಕಳುಹಿಸಿಕೊಡುವಂತಹ ಶುಭ ಸಂದೇಶಗಳು ಇಲ್ಲಿವೆ.

- ಕಠಿಣ ಪರಿಶ್ರಮ ಮತ್ತು ಸಮರ್ಪಣಾ ಭಾವದಿಂದ ಕೆಲಸ ಮಾಡುವ ಪ್ರತಿಯೊಬ್ಬರಿಗೂ ಗೌರವ ಸಲ್ಲಿಸುವ ದಿನ ಇದು.
- ದೇಶದ ಅಭಿವೃದ್ಧಿಗೆ ನಿರಂತರ ಸೇವೆ ಸಲ್ಲಿಸುತ್ತಿರುವ ಶ್ರಮಜೀವಿಗಳೆ ದೇಶದ ನಿಜವಾದ ಆಸ್ತಿ.
- ಒಬ್ಬ ಕಾರ್ಮಿಕ ಅದ್ಭುತಗಳ ನಿರ್ಮಾತೃ ಮತ್ತು ಪ್ರತಿ ರಾಷ್ಟ್ರಕ್ಕೂ ದೊಡ್ಡ ಆಸ್ತಿ.
- ದುಡಿಮೆ ಮನುಷ್ಯನ ಘನತೆ ಮತ್ತು ಸೃಜನಶೀಲತೆಯ ಶ್ರೇಷ್ಠತೆಯನ್ನು ವ್ಯಕ್ತಪಡಿಸುವ ಏಣಿ.
- ಜೀವನದ ಕಠಿಣ ಸವಾಲುಗಳನ್ನೂ ಮೆಟ್ಟಿ ನಿಂತು ಪರಿಶ್ರಮದಲ್ಲಿಯೇ ಬದುಕಿನ ಖುಷಿ ಕಾಣುವ ಎಲ್ಲ ಕಾರ್ಮಿಕರೆ ದೇಶದ ನಿಜವಾದ ಆಸ್ತಿ.
- ಕಾರ್ಮಿಕರೇ ಈ ದೇಶದ ಆಸ್ತಿ. ಕಾರ್ಮಿಕರೇ ಕಠಿಣ ಪರಿಶ್ರಮಕ್ಕೆ ಸ್ಪೂರ್ತಿ. ಕಾರ್ಮಿಕರ ದುಡಿಮೆಯಲ್ಲಡಗಿದೆ ದೇಶದ ಅಭಿವೃದ್ಧಿ.

2020-21ನೇ ಸಾಲಿನಲ್ಲಿ ರಾಷ್ಟ್ರೀಯ ಅಂಕಿ ಅಂಶಗಳ ಕಛೇರಿ (National Statistical Office)ಯು ನಡೆಸಿದ ಸಮೀಕ್ಷೆಯ ಪ್ರಕಾರ ಭಾರತದಾದ್ಯಂತ ಸುಮಾರು 38 ಕೋಟಿಗೂ ಅಧಿಕ ಕಾರ್ಮಿಕರು ಅಸಂಘಟಿತ ವರ್ಗಗಳಲ್ಲಿ ತೊಡಗಿಕೊಂಡಿರುತ್ತಾರೆ. ಪ್ರಸ್ತುತ ಅಸಂಘಟಿತ ಕಾರ್ಮಿಕರ ಕೇಂದ್ರೀಕೃತ ದತ್ತಾಂಶ ಲಭ್ಯವಿರುವುದಿಲ್ಲ. ಅಂತಹ ಕೇಂದ್ರೀಕೃತ ದತ್ತಾಂಶದ ಅಲಭ್ಯತೆಯ ಕಾರಣ ಕೇಂದ್ರ

ಹಾಗೂ ರಾಜ್ಯ ಸರ್ಕಾರಗಳಿಗೆ, ವಲಸೆ ಕಾರ್ಮಿಕರು ಹಾಗೂ ಕಟ್ಟಡ ಕಾರ್ಮಿಕರು ಸೇರಿದಂತೆ ಅಸಂಘಟಿತ ವರ್ಗಗಳ ಕಾರ್ಮಿಕರಿಗೆ ಸಂಬಂಧಿಸಿದ ಸಮಸ್ಯೆಗಳ ನಿವಾರಣೋಪಾಯ ಕಲ್ಪಿಸುವುದು ಕಷ್ಟ ಸಾಧ್ಯವಾಗಿರುತ್ತದೆ. ಅಸಂಘಟಿತ ಹಾಗೂ ವಲಸೆ ಕಾರ್ಮಿಕರ ಸಮಗ್ರ ದತ್ತಾಂಶವು ಅವರಿಗೆ ಸಾಮಾಜಿಕ ಭದ್ರತಾ ಯೋಜನೆಗಳನ್ನು ವಿಸ್ತರಿಸಲು ಸಹಾಯಕವಾಗಿರುತ್ತದೆ. ಕಾರ್ಮಿಕ ವರ್ಗಗಳಲ್ಲಿ ಅತ್ಯಂತ ದುರ್ಬಲ ವರ್ಗದವರಾದ ವಲಸೆ ಕಾರ್ಮಿಕರು ಸೇರಿದಂತೆ ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಅಸಂಘಟಿತ ಕಾರ್ಮಿಕರ ರಾಷ್ಟ್ರೀಯ ಸಮಗ್ರ ದತ್ತಾಂಶವನ್ನು ಸಿದ್ಧಪಡಿಸಲು ಸರ್ಕಾರ ಕ್ರಮ ಕೈಗೊಂಡಿದೆ.

### 2050 ನಂತರ ಭಾರತದ ಕಾರ್ಮಿಕರ ಸಂಖ್ಯೆಯಲ್ಲಿ ಇಳಿಕೆ

2050ರ ಬಳಿಕ ದುಡಿಯುವ ವರ್ಗದ ಪ್ರಮಾಣ ಕಡಿಮೆಯಾಗಲಿದೆ. ಇದು ಪ್ರಸಕ್ತ ಯುರೋಪ್ ಎದುರಿಸುತ್ತಿರುವ ದುಡಿಯುವ ವರ್ಗದ ಕಡಿಮೆ ಅನುಪಾತಕ್ಕೆ ತಾಳೆಯಾಗಲಿದೆ. ಭವಿಷ್ಯದಲ್ಲಿ ಇದು ದೇಶದ ಆರ್ಥಿಕತೆ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಈ ಬಗ್ಗೆ ಆರ್ಥಿಕ ತಜ್ಞರು ಚಿಂತನೆ ನಡೆಸಬೇಕಿದೆ. ಸಾಮಾನ್ಯವಾಗಿ ದುಡಿಯುವ ವರ್ಗದ ಜನರಲ್ಲಿ 40–45 ವರ್ಷದವರೆಗೆ ಹೆಚ್ಚಿನ ಉಳಿತಾಯ ಇರುತ್ತದೆ. ಬಳಿಕ ಉಳಿತಾಯದ ಪ್ರಮಾಣ ಕಡಿಮೆಯಾಗುತ್ತದೆ. ಯುರೋಪ್ ದೇಶಗಳಲ್ಲಿ ಬಹುತೇಕ 60 ವರ್ಷದ ಬಳಿಕ ದುಡಿಮೆ ನಿಂತು ಹೋಗುತ್ತದೆ. ಆದರೆ ಭಾರತದಲ್ಲಿ ಬಹುತೇಕ ಜನರು ಕೃಷಿಯನ್ನು ಅವಲಂಬಿಸಿರುವ ಕಾರಣ ದುಡಿಮೆ 80–90 ವರ್ಷದವರೆಗೂ ಇರುತ್ತದೆ.

### ಭಾರತದಲ್ಲಿ ದುಡಿಯುವ ವರ್ಗ

ವಿಶ್ವಸಂಸ್ಥೆಯ ಜಾಗತಿಕ ಜನಸಂಖ್ಯೆಯ ಅಂದಾಜಿನ ಪ್ರಕಾರ, ವಿಶ್ವದ ಅತ್ಯಂತ ದೊಡ್ಡ ಯುವರಾಷ್ಟ್ರಗಳಲ್ಲಿ ಭಾರತವೂ ಒಂದು. ಭಾರತದ ಒಟ್ಟು ಜನಸಂಖ್ಯೆ ಶೇ.68 ರಷ್ಟು ಮಂದಿ 15–64 ವರ್ಷ ವಯಸ್ಸಿನವರಾಗಿದ್ದಾರೆ. ಅರ್ಥಶಾಸ್ತ್ರದ ಪರಿಭಾಷೆಯಲ್ಲಿ ಈ ವಯಸ್ಸಿನ ಜನರನ್ನು 'ಉತ್ಪಾದಕ ಜನಸಂಖ್ಯೆ' ಎಂದು ಕರೆಯಲಾಗುತ್ತದೆ. ಉತ್ಪಾದಕ ಜನಸಂಖ್ಯೆಯು ಹೆಚ್ಚು ಇರುವ ದೇಶಗಳಲ್ಲಿ ಭಾರತವು ಎರಡನೇ ಸ್ಥಾನದಲ್ಲಿ ಇತ್ತು. ಈಗಲೂ ಅದೇ ಸ್ಥಾನವನ್ನು ಕಾಯ್ದುಕೊಂಡಿದೆ. ಆದರೆ ಮೊದಲ ಸ್ಥಾನದಲ್ಲಿ ಚೀನಾ ಇದ್ದು, ಚೀನಾ ಮತ್ತು ಭಾರತದ ಉತ್ಪಾದಕ ಜನಸಂಖ್ಯೆಯ ಅಂತರ ಒಂದು ಕೋಟಿ ಮಾತ್ರ. ವಿಶ್ವದ ಒಟ್ಟು ಜನಸಂಖ್ಯೆ ಮತ್ತು ವಿಶ್ವದ ಒಟ್ಟು ಉತ್ಪಾದಕ ಜನಸಂಖ್ಯೆಗೆ ಹೋಲಿಸಿದರೂ, ಭಾರತದ ಉತ್ಪಾದಕ ಜನಸಂಖ್ಯೆಯ ಪ್ರಮಾಣ ಹೆಚ್ಚೇ ಇದೆ. ಈ ಕಾರಣದಿಂದಲೇ ಭಾರತವನ್ನು ಯುವರಾಷ್ಟ್ರ ಎಂದು ಕರೆಯಲಾಗುತ್ತದೆ.

- 804.5 ಕೋಟಿ/ ವಿಶ್ವದ ಒಟ್ಟು ಜನಸಂಖ್ಯೆ
- 522.92 ಕೋಟಿ/ ವಿಶ್ವದ ಒಟ್ಟು ಉತ್ಪಾದಕ ಜನಸಂಖ್ಯೆ (15–64 ವರ್ಷದವರು)
- 522.92 ಕೋಟಿ/ ವಿಶ್ವದ ಒಟ್ಟು ಉತ್ಪಾದಕ ಜನಸಂಖ್ಯೆ (15–64 ವರ್ಷದವರು)
- 98 ಕೋಟಿ/ ಭಾರತದ ಉತ್ಪಾದಕ ಜನಸಂಖ್ಯೆ
- 99 ಕೋಟಿ/ ಚೀನಾದ ಉತ್ಪಾದಕ ಜನಸಂಖ್ಯೆ
- 327.92 ಕೋಟಿ/ವಿಶ್ವದ ಬೇರೆಲ್ಲಾ ದೇಶಗಳ ಉತ್ಪಾದಕ ಜನಸಂಖ್ಯೆ

### ಉತ್ಪಾದಕ ಜನಸಂಖ್ಯೆ 98 ಕೋಟಿ

ಭಾರತದಲ್ಲಿ ಈಗ (2024ರಲ್ಲಿ) 15 ರಿಂದ 64 ವರ್ಷ ವಯಸ್ಸಿನ 98 ಕೋಟಿಯಷ್ಟು ಜನರು ಇದ್ದಾರೆ ಎಂದು ವಿಶ್ವಸಂಸ್ಥೆಯು ಅಂದಾಜಿಸಿದೆ. ಇದು ವಿಶ್ವದಲ್ಲೇ ಹೆಚ್ಚು. ವಿಶ್ವಸಂಸ್ಥೆಯು ಎಲ್ಲಾ ದೇಶಗಳ ಜನಸಂಖ್ಯಾ ದತ್ತಾಂಶಗಳನ್ನು ಸಂಗ್ರಹಿಸಲು ಆರಂಭಿಸಿದ್ದು 1950ರಲ್ಲಿ. ಅಲ್ಲಿಂದ ಪ್ರತಿ ಹತ್ತು ವರ್ಷಗಳಿಗೆ ಒಮ್ಮೆ ಜನಸಂಖ್ಯಾ ಅಂದಾಜನ್ನು ಬಿಡುಗಡೆ ಮಾಡುತ್ತದೆ. ಆನಂತರ ಆಯಾ ನೈಜ ಜನಸಂಖ್ಯೆಯ ದತ್ತಾಂಶಗಳಿಗೆ ತಾಳೆ ಮಾಡಿ, ನೈಜ ಜನಸಂಖ್ಯೆಯ ದತ್ತಾಂಶಗಳನ್ನು ವರದಿಗೆ ಸೇರಿಸುತ್ತದೆ. ಹೀಗೆ ವಿಶ್ವಸಂಸ್ಥೆಯು ಸಿದ್ಧಪಡಿಸಿರುವ ಭಾರತದ ಜನಸಂಖ್ಯಾ ವರದಿಯಲ್ಲಿ, 'ಭಾರತದ ಉತ್ಪಾದಕ ಜನಸಂಖ್ಯೆ'ಯ ದತ್ತಾಂಶಗಳೂ ಇವೆ. 1950ರಲ್ಲಿ ಭಾರತದಲ್ಲಿ ಈ ವಯಸ್ಸಿನ ಒಟ್ಟು 22 ಕೋಟಿ ಜನರಿದ್ದರು. 2024ರಲ್ಲಿ ಈ ಜನಸಂಖ್ಯೆಯು 98 ಕೋಟಿಗೆ ಏರಿಕೆಯಾಗಿದೆ. ಮುಂದಿನ ದಶಕಗಳಲ್ಲೂ ಈ ಸಂಖ್ಯೆ ಏರಿಕೆಯಾಗಲಿದೆ. 2050ರ ವೇಳೆಗೆ ಈ ವಯಸ್ಸಿನ ಜನರ ಸಂಖ್ಯೆ 113 ಕೋಟಿಗೆ ಏರಿಕೆಯಾಗಲಿದೆ ಎಂದು ವಿಶ್ವ ಸಂಸ್ಥೆ ಅಂದಾಜಿಸಿದೆ

### ದುಡಿಯುವ ವಯಸ್ಸಿನವರ ಪಾಲೇ ಅಧಿಕ

ವಿಶ್ವದ ಜನಸಂಖ್ಯೆಯನ್ನು ವಿವಿಧ ವಯೋಮಾನಗಳಲ್ಲಿ ವರ್ಗೀಕರಿಸಲಾಗಿದೆ. ಜನಸಂಖ್ಯಾ ಅನುಪಾತವನ್ನು ಗಮನಿಸಿದರೆ, 15–64 ವರ್ಷದ ವಯೋಮಾನದ ಜನರು ಅಧಿಕ ಪ್ರಮಾಣದಲ್ಲಿ ಇದ್ದಾರೆ. ಅನುತ್ಪಾದಕ ವರ್ಗ ಎಂದು ಕರೆಯಲಾಗುವ 14 ವರ್ಷದೊಳಗಿನವರು (ಶೇ.25) ಹಾಗೂ 65 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನವರು (ಶೇ 10) ನಂತರದ ಸ್ಥಾನದಲ್ಲಿದ್ದಾರೆ. ಬೇರೆ ಬೇರೆ ದೇಶಗಳಲ್ಲಿ ಈ ವಿವಿಧ ವರ್ಗದ ಜನರ ಹಂಚಿಕೆ ಭಿನ್ನವಾಗಿದೆ.

### ಭಾರತದಲ್ಲಿ ಕಾರ್ಮಿಕರ ಸ್ಥಿತಿಗತಿ

ಭಾರತದಲ್ಲಿ ಕಾರ್ಮಿಕರನ್ನು ಸಂಘಟಿತ ಕಾರ್ಮಿಕರು ಹಾಗೂ ಅಸಂಘಟಿತ ಕಾರ್ಮಿಕರೆಂದು ವಿಭಾಗಿಸಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸ್ವಾಮ್ಯದ ಅಡಿ ದುಡಿಯುವ ಕಾರ್ಮಿಕರು ಬಹುತೇಕ ಸಂಘಟಿತ ಕಾರ್ಮಿಕರಾಗಿದ್ದು, ದೇಶದಲ್ಲಿ ಕೇವಲ ಪ್ರತಿಶತ 12 ರಿಂದ 15 ರವರೆಗೆ ಮಾತ್ರ ಕಂಡು ಬಂದಿದ್ದು ತಮ್ಮ ಸಂಘಟಿತ ಹೋರಾಟದ ಮೂಲಕ ಬೇಡಿಕೆಗಳನ್ನು ತಕ್ಕ ಮಟ್ಟಿಗೆ ಈಡೇರಿಸಿಕೊಳ್ಳುತ್ತಿದ್ದರೆ.

ಇನ್ನೂಳಿದ ಶೇ 85 ರಷ್ಟು ಕಾರ್ಮಿಕರು, ಗ್ರಾಮೀಣ ಪ್ರದೇಶದಲ್ಲಿ ದುಡಿಯುವ ಭೂ ರಹಿತ ಮಹಿಳೆ ಹಾಗೂ ಪುರುಷ ಕಾರ್ಮಿಕರು ನಗರಗಳಲ್ಲಿ ಹೋಟೆಲ್‌ಗಳಲ್ಲಿ ದುಡಿಯುವ ಕಾರ್ಮಿಕರು, ಸಣ್ಣ ಉದ್ದಿಮೆಗಳಲ್ಲಿ

10ನೇ ಪುಟಕ್ಕೆ...

# ಉಚಿತ ವೈದ್ಯಕೀಯ ಶಿಬಿರ ಹಾಗೂ ನೇತ್ರ ತಪಾಸಣಾ ಶಿಬಿರ

**ಮಂಗಳೂರು :** ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ಇದರ ಮಾಡೂರು ಶಾಖೆಯ ವಾರ್ಷಿಕೋತ್ಸವದ ಪ್ರಯುಕ್ತ ಶ್ರೀ ಶಿರಡಿ ಸಾಯಿಬಾಬಾ ಮಂದಿರ (ರಿ.) ಮಾಡೂರು ಇವರ ಜಂಟಿ ಸಹಯೋಗದೊಂದಿಗೆ ಸಮುದಾಯ ದಂತ ಆರೋಗ್ಯ ವಿಭಾಗ, ಯೆನೆಪೋಯ ದಂತ ಕಾಲೇಜು ಮತ್ತು ಆಸ್ಪತ್ರೆ, ದೇರಳಕಟ್ಟೆ ಇವರ ನುರಿತ ತಜ್ಞ ವೈದ್ಯ ತಂಡದವರಿಂದ ಉಚಿತ ದಂತ ತಪಾಸಣೆ ಮತ್ತು ಕೆಎಂಸಿ ಆಸ್ಪತ್ರೆ ಅತ್ತಾವರ, ಮಂಗಳೂರು ಇವರ ನುರಿತ ತಜ್ಞ ವೈದ್ಯರ ತಂಡದವರಿಂದ ಉಚಿತ ವೈದ್ಯಕೀಯ ಮತ್ತು ನೇತ್ರ ತಪಾಸಣಾ ಶಿಬಿರ ಮಾಡೂರು ಶಾಖೆಯ ಆವರಣದಲ್ಲಿ ಜರುಗಿತು.

ಈ ಕಾರ್ಯಕ್ರಮವನ್ನು ಸಮುದಾಯ ದಂತ ಆರೋಗ್ಯ ವಿಭಾಗ, ಯೆನೆಪೋಯ ದಂತ ಕಾಲೇಜು ಮತ್ತು ಆಸ್ಪತ್ರೆ, ದೇರಳ ಕಟ್ಟೆ ಇಲ್ಲಿನ ವೈದ್ಯರಾದ ಡಾ। ಅಪೂರ್ವ ಕೋಟ್ಯಾನ್ ಉದ್ಘಾಟಿಸಿ ಮಾತನಾಡಿ ಸಮಾಜದ ಎಲ್ಲಾ ಜನರು ಉದ್ಯೋಗದ ಜೊತೆ ತಮ್ಮ ಆರೋಗ್ಯದ ಬಗ್ಗೆ ಕಾಳಜಿಯನ್ನು ವಹಿಸಿ ಎಂದು ಸಲಹೆ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಚಿತ್ತರಂಜನ್ ಬೋಳಾರ್ ಇವರು ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘವು ಕಳೆದ 12 ವರ್ಷಗಳಿಂದ ವೈದ್ಯಕೀಯ




ಶಿಬಿರವನ್ನು ನಿರಂತರ ಏರ್ಪಡಿಸುತ್ತಿದ್ದು, ಸಾರ್ವಜನಿಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಸಂಘದ 65ನೇ ಉಚಿತ ವೈದ್ಯಕೀಯ ಶಿಬಿರವು ಇದಾಗಿದ್ದು, ಮುಂದಿನ ದಿನಗಳಲ್ಲಿ ಉಳ್ಳಾಲದ ಪರಿಸರದಲ್ಲೂ ಶಿಬಿರವನ್ನು ಆಯೋಜಿಸಲಾಗುವುದೆಂದು ತಿಳಿಸಿದರು.

ಸಂಘ ಲಾಭದಲ್ಲಿ ಸಂಘದ ಸದಸ್ಯರ ಆರೋಗ್ಯ ಕಾಳಜಿಯಿಂದ ಇಂತಹ ಆರೋಗ್ಯ ಶಿಬಿರವನ್ನು ಆಯೋಜಿಸಿದ್ದು, ಸಂಘದ ಸದಸ್ಯರಿಗೆ ಕೋರೋನ ಸಮಯದಲ್ಲಿ ಶೇ. 4ರ ಬಡ್ಡಿದಲ್ಲಿ ಚಿನ್ನಾಭರಣ ಸಾಲ ಮತ್ತು ಮನ್ಸೂನ್ ಸಮಯದಲ್ಲಿಯೂ ಕೂಡ ಮನ್ಸೂನ್ ವಿಶೇಷ ಬಡ್ಡಿದರದಲ್ಲಿ ಸಾಲವನ್ನು ನೀಡಿ ಆರ್ಥಿಕವಾಗಿ ಸಹಕಾರಿಯಾಗಿರುವುದು ಸಮಾಜಿಕ ಚಟುವಟಿಕೆಗೆ ಪೂರಕ ಎಂದರು. ಸಂಘದ ಉಪಾಧ್ಯಕ್ಷರಾದ ನೇಮಿರಾಜ್ ನಿರ್ದೇಶಕರಾದ ಆನಂದ ಎಸ್. ಕೊಂಡಾಣ ಮತ್ತು ಗೋಪಾಲ್ ಎಮ್, ಚಂದ್ರಹಾಸ್ ಮರೋಳಿ ಹಾಗೂ ಶ್ರೀ ಶಿರಡಿ ಸಾಯಿಬಾಬಾ ಮಂದಿರದ ಆಡಳಿತ ಮೋಕ್ತೇಸರರಾದ ಸುರೇಶ್ ಕೆ.ಪಿ ಮತ್ತು ಯೆನೆಪೋಯ ದಂತ ಕಾಲೇಜು ಮತ್ತು ಆಸ್ಪತ್ರೆ ಇಲ್ಲಿನ ವೈದ್ಯರಾದ ಡಾ। ಅಪೂರ್ವ ಕೋಟ್ಯಾನ್ ಹಾಗೂ ಪಿ.ಆರ್.ಓ ಆದ ಭರತ್ ಕುಮಾರ್ ಮತ್ತು ಕೆಎಂಸಿ ಆಸ್ಪತ್ರೆ ಅತ್ತಾವರ ಇಲ್ಲಿನ ವೈದ್ಯರಾದ ಡಾ। ಸಂಜನಾ ಮತ್ತು ಡಾ। ರಾಹುಲ್ ಹಾಗೂ ನಮ್ಮ ಸಂಘದ ಮುಖ್ಯಕಾರ್ಯ ನಿರ್ವಹಣಾಧಿಕಾರಿಯಾದ ಸೌಮ್ಯ ವಿಜಯ್ ಇವರು ಉಪಸ್ಥಿತರಿದ್ದರು.

ಸಂಘದ ಹಿರಿಯ ಶಾಖಾಧಿಕಾರಿಯಾದ ರವಿಕಲಾ ವಿಶ್ವನಾಥ್ ಸ್ವಾಗತಿಸಿ., ಉಳ್ಳಾಲ ಶಾಖೆಯ ಶಾಖಾಧಿಕಾರಿಯಾದ ಭವ್ಯ ಯೋಗೀಶ್ ರವರು ವಂದಿಸಿದರು. ಮಾಡೂರು ಶಾಖೆಯ ಶಾಖಾಧಿಕಾರಿ ಶ್ರೀಮತಿ ಸೌಮ್ಯಲತಾ ರವರು ಕಾರ್ಯಕ್ರಮ ನಿರೂಪಿಸಿದರು.

...9ನೇ ಪುಟದಿಂದ

ದುಡಿಯುವವರು, ಈ ಮುಂತಾದ ಕ್ಷೇತ್ರಗಳಲ್ಲಿ ದುಡಿವ ಕೆಲಸಗಾರರು ಅಸಂಘಟಿತ ಕಾರ್ಮಿಕರು. ಇವರಿಗೆ ಮೂಲತಃ ನಿರ್ದಿಷ್ಟ ಕೂಲಿ ಎಂಬುದೇ ಗಗನ ಕುಸುಮವಾಗಿದ್ದು ತೀವ್ರತರ ಶೋಷಣೆಗೆ ಒಳಪಟ್ಟಿದ್ದಾರೆ.

ಇಂತಹ ಕಾರ್ಮಿಕರನ್ನು ಗಮನದಲ್ಲಿಟ್ಟುಕೊಂಡು ಸ್ವಾತಂತ್ರ ನಂತರ ಕೇಂದ್ರ ಸರ್ಕಾರ 1949ರಲ್ಲಿ ಕನಿಷ್ಠ ಕೂಲಿ ಕಾಯ್ದೆಯನ್ನು ಜಾರಿಗೆ ತಂದಿದ್ದು, ಆ ಕಾಯ್ದೆಯು ಬಹುತೇಕವಾಗಿ ಹಲ್ಲಿಲ್ಲದ ಕಾಯ್ದೆಯಾಗಿದ್ದು ಪರಿಪೂರ್ಣವಾಗಿ ಜಾರಿಯಲ್ಲಿ ತರಲು ಸಾಧ್ಯವಾಗಿಲ್ಲ.

ದೇಶ ಕಟ್ಟುವ ಕಾಯಕದಲ್ಲಿ ಹಗಲಿರುಳು ದುಡಿಯುತ್ತಿರುವ ಕೋಟ್ಯಾಂತರ ಸಂಖ್ಯೆಯ ಕಾರ್ಮಿಕ ಸಮುದಾಯಕ್ಕೆ ಯಾವುದೆ ಜಾತಿ, ಧರ್ಮ, ಭಾಷೆ, ಬಣ್ಣ, ಪ್ರಾಂತ್ಯಗಳ ಭೇದವಿಲ್ಲ. ಕಾಯಕದಲ್ಲಿಯೇ ಕೈಲಾಸ ಕಾಣುವ ಕಾರ್ಮಿಕ ವರ್ಗಕೆ ದುಡಿಮೆಯ ಜಾತಿ, ದುಡಿಮೆಯೆ ದೇವರು ದುಡಿಮೆ ಧರ್ಮ ಹಾಗೂ ದುಡಿಮೆಯೆ ಸರ್ವಸ್ವವೂ ಆಗಿದ್ದು, ಈ ಸಮುದಾಯಕ್ಕೆ ದುಡಿಯಲು ಉತ್ತಮ ಸೌಲಭ್ಯ ಕಲ್ಪಿಸಿಕೊಡುವುದರ ಜೊತೆಗೆ ವೈಜ್ಞಾನಿಕ ರೀತಿಯಲ್ಲಿ ವೇತನ ನಿಗದಿ ಪಡಿಸುವುದು ಹಾಗೂ ಅವರ ಕುಟುಂಬಕ್ಕೆ ಸಾಮಾಜಿಕ ಭದ್ರತೆ ಕಲ್ಪಿಸುವುದು ನಾಗರಿಕ ಸರ್ಕಾರಗಳ ಜವಾಬ್ದಾರಿಯಾಗಿದೆ.

**▸▸ ಮಂಜುನಾಥ್ ನಾಯ್ಕ್,**
**ಹಿರಿಯ ಪತ್ರಕರ್ತರು, ಬೆಂಗಳೂರು.**



# ಸಹಕಾರ ಸಂಸ್ಥೆಗಳಲ್ಲಿ ಲೆಕ್ಕಪರಿಶೋಧನೆ ಮತ್ತು ಪರಿವೀಕ್ಷಣೆಯಲ್ಲಿ ಆಸ್ತಿಗಳ ಪರಿಶೀಲನೆ – ಪ್ರಾಮುಖ್ಯತೆ

ಶಶಿಧರ ಎಲೆ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ), ಬೆಂಗಳೂರು.

ಸಹಕಾರ ಸಂಘ / ಸಹಕಾರಿಗಳು ಆರ್ಥಿಕ ವರ್ಷ ಮುಗಿದ ಒಂದು ತಿಂಗಳು (ಏಪ್ರಿಲ್) ಒಳಗೆ ತನ್ನ ಅಂತಿಮ ಲೆಕ್ಕಗಳನ್ನು ಸಿದ್ದಪಡಿಸತಕ್ಕದ್ದು, ಶಾಸನಬದ್ಧ ಅಗತ್ಯತೆ. ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 63, ಸಹಕಾರ ಸಂಘಗಳ ನಿಯಮ 60ರ ಸಂ.29 ರಿಂದ 30ಎ ಮತ್ತು ಸಹಕಾರ ಸಂಘಗಳ ಅಧಿನಿಯಮ 1997 ಕಲಂ.33, ನಿಯಮ 2004 ಸಂ.8 ರಿಂದ 10ರವರೆಗೆ ಲೆಕ್ಕಪರಿಶೋಧನೆ ಮತ್ತು ವಿಧಿವಿಧಾನಗಳ ಬಗ್ಗೆ ತಿಳಿಯಪಡಿಸಲಾಗಿದೆ. ಇದು ಸಹಕಾರ ಸಂಸ್ಥೆಗಳ ಆಸ್ತಿಗಳ ಪರಿಶೀಲನೆಯನ್ನೂ ಒಳಗೊಂಡಿರುತ್ತದೆ. ಇದಕ್ಕೆ ಸಹಕಾರ ಬ್ಯಾಂಕ್‌ಗಳು ಹೊರತಾಗಿರುವುದಿಲ್ಲ. ಇತ್ತೀಚೆಗೆ ಸಹಕಾರ ಬ್ಯಾಂಕ್‌ಗಳಲ್ಲಿ ಆದ ಅನಾಹುತಗಳು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಗೆ ತಿದ್ದುಪಡಿಗೆ ಕಾರಣವಾಗಿ ನಿಯಂತ್ರಣ ಬ್ಯಾಂಕ್ ಆದ ರಿಸರ್ವ್ ಬ್ಯಾಂಕ್ ಹೆಚ್ಚು ನಿಯಂತ್ರಣಗಳನ್ನು ಹೊರಿಸಲು ಸಾಧ್ಯವಾಗಿದೆ. ಈಗ ರಿಸರ್ವ್ ಬ್ಯಾಂಕ್ ಲೆಕ್ಕಪರಿಶೋಧನೆಗೂ ಕೆಲವು ಮಾನದಂಡಗಳನ್ನು ವಿಧಿಸಿರುತ್ತದೆ. ಲೆಕ್ಕಪರಿಶೋಧಕರ ನೇಮಕಾತಿಗೆ ರಿಸರ್ವ್ ಬ್ಯಾಂಕ್‌ನ ಪೂರ್ವಾನುಮತಿ ಅಗತ್ಯ. ಆಸ್ತಿಯ ಗಾತ್ರ ರೂ.15,000 ಕೋಟಿ ಮೀರಿದ್ದಲ್ಲಿ ಎರಡು ಲೆಕ್ಕಪರಿಶೋಧಕರು (ಕಂಪನಿ)ಗಳು ಜಂಟಿಯಾಗಿ ಲೆಕ್ಕಪರಿಶೋಧನೆ ನಡೆಸುವುದು ಅಗತ್ಯವಾಗುತ್ತದೆ.

ಇದರ ಹಿನ್ನೆಲೆಯಲ್ಲಿ ಸಹಕಾರ ಸಂಸ್ಥೆಗಳು ಅತಿಯಾದ ನಿಯಂತ್ರಣಕ್ಕೆ ಒಳಪಡಲು ಕಾರಣಗಳೇನು ಎಂಬುದನ್ನು ವಿಶ್ಲೇಷಿಸ ಬೇಕಾಗಿದೆ. ಇದಕ್ಕೆ ಪ್ರಮುಖ ಕಾರಣ ಸಂಸ್ಥೆಗಳ




ಚುಕ್ಕಾಣಿ ಹಿಡಿದಿರುವ ಆಡಳಿತ ಮಂಡಳಿಯ ವೈಫಲ್ಯ. ಆಡಳಿತ ಮಂಡಳಿ ತಮ್ಮ ಸಂಸ್ಥೆಯ ಆಗುಹೋಗುಗಳ ಬಗ್ಗೆ ಅಗತ್ಯ ಹಿಮ್ಮಾಹಿತಿ ಪಡೆಯದಿರುವುದು. ಸಕಾಲಿಕ ನಿರ್ಧಾರಗಳು, ಅಗತ್ಯ ಚಿಕಿತ್ಸಕ ಕ್ರಮಗಳನ್ನು ಕೈಗೊಳ್ಳದೇ ಇರುವುದು ಕಾರಣವಾಗಿರುತ್ತದೆ. ಕೆಲವು ಬಾರಿ ಬೇಲಿಯೇ ಎದ್ದು ಹೊಲ ಮೇಯುವ ಪರಿಸ್ಥಿತಿಯಾಗಿರುತ್ತದೆ. ಈ 'ಪರಿಸ್ಥಿತಿ'ಯು 'ಪರಿವೀಕ್ಷಣೆ'ಯಲ್ಲಾಗಲಿ 'ಲೆಕ್ಕಪರಿಶೋಧನೆ'ಯಲ್ಲಾಗಲಿ ಪ್ರತಿಫಲನಗೊಳ್ಳದೇ ಇರುವುದಕ್ಕೆ ಕಾರಣವಾದರೂ ಏನು? ಇದು 'ಅಗೋಚರ' ಪರಿಸ್ಥಿತಿಯಲ್ಲಿ ಹುದುಗಿದ್ದು'ಗೋಚರ'ವಾಗುವುದಾದರೂ ಯಾವಾಗ ಮತ್ತು ಹೇಗೆ? ಎಂಬುದನ್ನು ಪರಿಶೀಲಿಸಬೇಕಾಗಿದೆ.

ವ್ಯವಹಾರದ ಗಾತ್ರ ಅಧಿಕವಿದ್ದು ಲಾಭಗಳಿಕೆ ಕಡಿಮೆ ಇರುವುದು, ಲಾಭಗಳಿಸಿದ್ದರೂ ತನ್ನ ಜವಾಬ್ದಾರಿಗಳನ್ನು ತೀರಿಸುವಲ್ಲಿ ಸಂಕಷ್ಟ ಎದುರಿಸುತ್ತಿರುವುದು 'ಡಿವಿಡೆಂಡ್' ಹಂಚಿಕೆ ಮಾಡಲಾಗದಿರುವುದು ಠೇವಣಿದಾರರಿಗೆ ಸಕಾಲದಲ್ಲಿ ಠೇವಣಿ ಹಿಂತಿರುಗಿಸಲು ಸಾಧ್ಯವಾಗದಿರುವುದು, ಸಾಲಗಾರರಿಗೆ ಸಾಲ ಮರುಪಾವತಿಸಲು ಸಾಧ್ಯವಾಗದಿರುವುದು ವ್ಯವಹಾರಕ್ಕೆ ಬಂಡವಾಳದ ಕೊರತೆಯಾದಾಗ ಇಂತಹ ವಿಷಮ ಪರಿಸ್ಥಿತಿಗಳಲ್ಲಿ ಸಂಸ್ಥೆಯಲ್ಲಿ 'ಏನೋ, ಎಲ್ಲಿಯೋ ಲೋಪವಾಗಿದೆ' ಎಂಬುದು ಗೋಚರವಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಅಂತಿಮ ಲೆಕ್ಕಗಳ ತಯಾರಿಕೆಯಲ್ಲಿ ತಾಳ ಮೇಳವಿಲ್ಲದಾಗಲೂ ಗೋಚರವಾಗುತ್ತದೆ. ಬಹಳಷ್ಟು ಪ್ರಸಂಗಗಳಲ್ಲಿ 'ಕೊಟ್ಟವನು ಕೋಡಂಗಿ ಈಸಿಕೊಂಡವನು ಈರಭದ್ರ' ಆಗುತ್ತಾನೆ. ಅಲ್ಲದೆ 'ಹುಚ್ಚು ಮುಂಡೆ ಮದುವೇಲಿ ಉಂಡೋನೆ ಜಾಣ' ಎಂಬ ಗಾದೆಗಳು ಸಾರ್ಥಕತೆಯನ್ನು ಪಡೆಯುತ್ತವೆ. ಇದಕ್ಕೆ ಪರಿಹಾರವಾದರೂ ಏನು?

ಇದಕ್ಕೆ ಪರಿಹಾರವೇ 'ಪರಿವೀಕ್ಷಣೆ' ಮತ್ತು'ಲೆಕ್ಕಪರಿಶೋಧನೆ'. ಅದರಲ್ಲಿಯೂ ಈ ಎರಡು ಕ್ರಿಯೆಗಳ ಸಂದರ್ಭದಲ್ಲಿ ಕೈಗೊಳ್ಳಬೇಕಾದ 'ಆಸ್ತಿಗಳ ಪರಿಶೀಲನೆ ಕಾರ್ಯ'.

ಸಹಕಾರ ಸಂಸ್ಥೆಯ ಸಂಪನ್ಮೂಲಗಳು ಅದರ ಪಾವತಿಯಾದ ಷೇರುಬಂಡವಾಳ, ಕ್ರೋಢೀಕೃತ ನಿಧಿಗಳು, ಠೇವಣಾತಿಗಳು, ಪಡೆದ ಸಾಲಗಳು, ಹಂಚಿಕೆಯಾಗದ ಲಾಭಗಳು,

ಬೌಧಿಕ ಇರುವಿಕೆ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು. ಪತ್ತಿನ ಸಹಕಾರ ಸಂಸ್ಥೆಗಳು, ಪತ್ತು ವ್ಯವಹಾರ ನಡೆಸುತ್ತಿರುವ ಸಹಕಾರ ಸಂಸ್ಥೆಗಳು, ಸಹಕಾರ ಬ್ಯಾಂಕ್‌ಗಳು ಇವುಗಳಲ್ಲಿ ಅವರ ಪ್ರಮುಖ ಆಸ್ತಿಯೇ 'ಸಾಲಗಳು ಮತ್ತು ಮುಂಗಡಗಳು'. ಇದರ ವಾಸ್ತವತೆ ಮತ್ತು ಆರೋಗ್ಯವೇ ಸಂಸ್ಥೆಯ ಆಗುಹೋಗುಗಳಿಗೆ ಕಾರಣವಾಗಿರುತ್ತದೆ. ಇದರ ಸವಿವರವಾದ ಪರಿಶಿಷ್ಟ (ಷಡ್ಯೂಲ್) ನಿಖರವಾಗಿ ಪ್ರಕರಣಾವಾರು (ಕೇಸ್ ಬೈ ಕೇಸ್ ಸ್ಟಡಿ, ಅನಾಲಿಸಿಸ್) ವಿಶ್ಲೇಷಣೆ ಮಾಡಲೇಬೇಕಾಗಿರುತ್ತದೆ. ದಾಖಲೆಗಳ ಪರಿಶೀಲನೆಯಲ್ಲದೆ ಸಾಲಗಾರರ ಪರಿಶೀಲನೆ ಅವರು ಒದಗಿಸಿರುವ ರಕ್ಷಣಾತ್ಮಕ ಆಸ್ತಿಗಳ ಬೌಧಿಕ ಪರಿಶೀಲನೆ ಅತಿಅಗತ್ಯ. ಸಹಕಾರ ಸಂಸ್ಥೆಗಳಲ್ಲಿ ಅವರು ರಚಿಸಿಕೊಂಡಿರುವ ಸಾಲ ನೀತಿ, ನಿಯಮಗಳು ಅವುಗಳ ಉಲ್ಲಂಘನೆ, ಬ್ಯಾಂಕ್‌ಗಳಲ್ಲಿ ರಿಸರ್ವ್ ಬ್ಯಾಂಕ್ ನಿಗದಿ ಪಡಿಸಿದ ಮಾನದಂಡಗಳು ಉದಾ: ವಲಯಾವಾರು ತೊಡಗಿಸುವಿಕೆ (exposure norms) ಸಾಲ ಗರಿಷ್ಠ ಮಿತಿ ಎಡರು ತೊಡಕುಗಳು (risks) ಇವುಗಳ ನೈಜ, ನಿಖರ ನಿಷ್ಠೂರವಾದ ಪರಿಶೀಲನೆ ಅಗತ್ಯ. ಇದೇ ರೀತಿಯಲ್ಲಿ'ಖರೀದಿ ಮಾರಾಟ' 'ರೂಪಾಂತರ/ ಸಂಸ್ಕರಣೆ' ಸಹಕಾರ ಸಂಸ್ಥೆಗಳಲ್ಲಿ ಆಖೈರು ದಾಸ್ತಾನಿನ ವಾಸ್ತವ ಪರಿಸ್ಥಿತಿ ಬೌಧಿಕ ಪರಿಶೀಲನೆ ಅತಿ ಅಗತ್ಯ. ಇತರೆ ಚರ ಮತ್ತು ಸ್ಥಿರಾಸ್ತಿಗಳು, ಅವುಗಳ ಸಂಬಂಧಿಸಿದ ದಾಖಲಾತಿಗಳು, ಕಡತಗಳು, ರಿಜಿಸ್ಟರ್‌ಗಳು ಮತ್ತು ಅವುಗಳ ಬೌಧಿಕ ಪರಿಶೀಲನೆ ಬಹು ಮುಖ್ಯ. ಈ ಪರಿಶೀಲನೆಗಳಲ್ಲಿ ವಿಫಲವಾಗಿರುವುದು 'ಹತ್ತಿಕೊಂಡು ಉರಿದ ಮೇಲೆ ಕೋಟೆ ಬಾಗಿಲು ಹಾಕಿದರು' ಎನ್ನುವ ಪರಿಸ್ಥಿತಿಗೆ ಕಾರಣವಾಗಿದೆ.

ದೇಣಿಗೆಗಳು, ಕೊಡುಗೆಗಳು ಆಗಿರುತ್ತವೆ. ಇವುಗಳನ್ನು ತನ್ನ ಆಸ್ತಿಯಲ್ಲಿ (ಜಿಂದಗಿ) ತೊಡಗಿಸಿರುತ್ತದೆ. ನಗದು ಮತ್ತು ಬ್ಯಾಂಕ್ ಶಿಲ್ಕುಗಳು, ಹೂಡಿಕೆಗಳು, ಸಾಲಗಳು ಮತ್ತು ಮುಂಗಡಗಳು, ಚರ ಮತ್ತು ಸ್ಥಿರ ಆಸ್ತಿಗಳು. ಈ ಆಸ್ತಿಗಳ ನೈಜ, ನಿಖರ ಪರಿಶೀಲನೆ ಆದಲ್ಲಿ ಸಂಪನ್ಮೂಲಗಳು (ಜವಾಬ್ದಾರಿಗಳು, ಸಾಲ) ಎಲ್ಲಿ, ಹೇಗೆ ತೊಡಗಿಸಲಾಗಿದೆ ಎಂಬುದು ಕಂಡು ಬರುತ್ತದೆ. ನಗದು ಪರಿಶೀಲನೆ ನಡೆಸಿ, ನಗದು ಇರುವುದನ್ನು ಖಾತ್ರಿಪಡಿಸಿಕೊಳ್ಳಬೇಕಾಗುತ್ತದೆ. ಬ್ಯಾಂಕಿನಲ್ಲಿನ ಶಿಲ್ಕು ಬಗ್ಗೆ ಬ್ಯಾಂಕಿನಿಂದ ದೃಢೀಕರಣ ಪಡೆದು ಖಚಿತ ಪಡಿಸಿಕೊಳ್ಳಬೇಕು. ಹೂಡಿಕೆಗಳ ಬಗ್ಗೆ ಇರುವ ದಾಖಲಾತಿಗಳು, ದೃಢೀಕರಣಗಳು ರಕ್ಷಣೆಗಳ ಸಂಬಂಧಿಸಿದ ಸಂಸ್ಥೆಗಳಿಂದ ಇವುಗಳ ಅಸಲಿಯತ್ತಿನ ಬಗ್ಗೆ ಖಚಿತಗೊಳಿಸಬೇಕು. ತಃಖ್ತೆಯಲ್ಲಿನ ಮೊತ್ತಕ್ಕೂ ದಾಖಲಾತಿಯಲ್ಲಿನ ಮೊತ್ತಕ್ಕೂ ತಾಳೆ ಇರಬೇಕಾಗುತ್ತದೆ. ಬೌಧಿಕ ಇರುವಿಕೆ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು. ಪತ್ತಿನ ಸಹಕಾರ ಸಂಸ್ಥೆಗಳು, ಪತ್ತು ವ್ಯವಹಾರ ನಡೆಸುತ್ತಿರುವ ಸಹಕಾರ ಸಂಸ್ಥೆಗಳು, ಸಹಕಾರ ಬ್ಯಾಂಕ್‌ಗಳು ಇವುಗಳಲ್ಲಿ ಅವರ ಪ್ರಮುಖ ಆಸ್ತಿಯೇ 'ಸಾಲಗಳು ಮತ್ತು ಮುಂಗಡಗಳು'. ಇದರ ವಾಸ್ತವತೆ ಮತ್ತು ಆರೋಗ್ಯವೇ ಸಂಸ್ಥೆಯ ಆಗುಹೋಗುಗಳಿಗೆ ಕಾರಣವಾಗಿರುತ್ತದೆ. ಇದರ ಸವಿವರವಾದ ಪರಿಶಿಷ್ಟ (ಷಡ್ಯೂಲ್) ನಿಖರವಾಗಿ ಪ್ರಕರಣಾವಾರು (ಕೇಸ್ ಬೈ ಕೇಸ್ ಸ್ಟಡಿ, ಅನಾಲಿಸಿಸ್) ವಿಶ್ಲೇಷಣೆ ಮಾಡಲೇಬೇಕಾಗಿರುತ್ತದೆ. ದಾಖಲೆಗಳ ಪರಿಶೀಲನೆಯಲ್ಲದೆ ಸಾಲಗಾರರ ಪರಿಶೀಲನೆ ಅವರು ಒದಗಿಸಿರುವ ರಕ್ಷಣಾತ್ಮಕ ಆಸ್ತಿಗಳ ಬೌಧಿಕ ಪರಿಶೀಲನೆ ಅತಿಅಗತ್ಯ. ಸಹಕಾರ ಸಂಸ್ಥೆಗಳಲ್ಲಿ ಅವರು ರಚಿಸಿಕೊಂಡಿರುವ ಸಾಲ ನೀತಿ, ನಿಯಮಗಳು ಅವುಗಳ ಉಲ್ಲಂಘನೆ, ಬ್ಯಾಂಕ್‌ಗಳಲ್ಲಿ ರಿಸರ್ವ್ ಬ್ಯಾಂಕ್ ನಿಗದಿ ಪಡಿಸಿದ ಮಾನದಂಡಗಳು ಉದಾ: ವಲಯಾವಾರು ತೊಡಗಿಸುವಿಕೆ (exposure norms) ಸಾಲ ಗರಿಷ್ಠ ಮಿತಿ ಎಡರು ತೊಡಕುಗಳು (risks) ಇವುಗಳ ನೈಜ, ನಿಖರ ನಿಷ್ಠೂರವಾದ ಪರಿಶೀಲನೆ ಅಗತ್ಯ. ಇದೇ ರೀತಿಯಲ್ಲಿ'ಖರೀದಿ ಮಾರಾಟ' 'ರೂಪಾಂತರ/ ಸಂಸ್ಕರಣೆ' ಸಹಕಾರ ಸಂಸ್ಥೆಗಳಲ್ಲಿ ಆಖೈರು ದಾಸ್ತಾನಿನ ವಾಸ್ತವ ಪರಿಸ್ಥಿತಿ ಬೌಧಿಕ ಪರಿಶೀಲನೆ ಅತಿ ಅಗತ್ಯ. ಇತರೆ ಚರ ಮತ್ತು ಸ್ಥಿರಾಸ್ತಿಗಳು, ಅವುಗಳ ಸಂಬಂಧಿಸಿದ ದಾಖಲಾತಿಗಳು, ಕಡತಗಳು, ರಿಜಿಸ್ಟರ್‌ಗಳು ಮತ್ತು ಅವುಗಳ ಬೌಧಿಕ ಪರಿಶೀಲನೆ ಬಹು ಮುಖ್ಯ. ಈ ಪರಿಶೀಲನೆಗಳಲ್ಲಿ ವಿಫಲವಾಗಿರುವುದು 'ಹತ್ತಿಕೊಂಡು ಉರಿದ ಮೇಲೆ ಕೋಟೆ ಬಾಗಿಲು ಹಾಕಿದರು' ಎನ್ನುವ ಪರಿಸ್ಥಿತಿಗೆ ಕಾರಣವಾಗಿದೆ. ಬಹಳಷ್ಟು ಪ್ರಕರಣಗಳಲ್ಲಿ ಪರಿಸ್ಥಿತಿ ಕೈಮೀರಿ ಸರಿಪಡಿಸಲಾರದ ಮಟ್ಟವನ್ನು ಮುಟ್ಟಿರುತ್ತೇವೆ. ಹೀಗಾಗಿ ಅನೇಕ ವೇಳೆ ಪರಿವೀಕ್ಷಣೆ, ಲೆಕ್ಕಪರಿಶೋಧನೆ ಕ್ರಮಗಳು 'ಶವ ಪರೀಕ್ಷೆ'ಯಾಗುತ್ತದೆ ವಿನಃ ಸದಸ್ಯರ, ಸಾರ್ವಜನಿಕರ ಹಿತಾಸಕ್ತಿ, ನಿರೀಕ್ಷೆ, ಆಸೆ ಆಕಾಂಕ್ಷೆ, ಅಗತ್ಯತೆಗಳನ್ನು ಈಡೇರಿಸಲು ಸಾಧ್ಯವಾಗುವುದಿಲ್ಲ.

ಅನೇಕ ಸೋರಿಕೆಗಳು, ದುರುಪಯೋಗಗಳು ದುರ್ವಿನಿಯೋಗಗಳು, ಮಿಥ್ಯ ಆಸ್ತಿಗಳು, ನಷ್ಟಗಳು ಆಸ್ತಿ ತಃಖ್ತೆಯಲ್ಲಿ ಆಸ್ತಿಯಾಗಿ ಹುದುಗಿರುತ್ತವೆ. ಇವುಗಳು 'ಕನ್ನಡಿಯೊಳಗಿನ ಗಂಟು'. 'ಬ್ಯಾಂಕ್‌ಗಳಲ್ಲಿ ಆಸ್ತಿ ವರ್ಗೀಕರಣದಲ್ಲಿ ಆಗುತ್ತಿರುವ ಅಗಾಧವಾದ ವ್ಯತ್ಯಾಸಗಳು ಮತ್ತು ತಪ್ಪುದಾರಿಗೆ ಕಾರಣವಾಗಿರುವ ಲೆಕ್ಕತಃಖ್ತೆಗಳನ್ನು ತಡೆಯಲು ಬಿಗಿ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ಎಂದು ರಿಸರ್ವ್ ಬ್ಯಾಂಕ್ ತಿಳಿಸಿರುತ್ತದೆ. ಈ ಅಕ್ರಮಗಳು "ಆತ್ಮ ವಂಚನೆ"ಯಲ್ಲದೇ ಮತ್ತೇನು? ತನ್ನ ಮೇಲೆ ವಿಶ್ವಾಸ ವಿರಿಸಿರುವ ಸದಸ್ಯರಿಗೆ, ಠೇವಣಿದಾರರಿಗೆ ಮೋಸವೆಸಗಿದಂತಾಗಲಿಲ್ಲವೇ? ಸಹಕಾರ ಚಳುವಳಿಗೆ ಇದು ಮಾರಕವಾಗಿ ಪರಿಣಮಿಸುವುದಿಲ್ಲವೇ? ಸಹಕಾರಿಗಳು 'ಆತ್ಮಾವಲೋಕನ' ಮಾಡಿಕೊಳ್ಳಲು ಇದು ಸಕಾಲ.

# ವಿಶ್ವಮಾನವ ಸಂದೇಶ ನೀಡಿದ ಕನ್ನಡದ ಧರ್ಮ ಹುಟ್ಟು ಹಾಕಿದ ಬಸವಣ್ಣ

▸▸ ಸವಿತಾ ನಾಯ್ಕ್, ಬೆಂಗಳೂರು

ಜಾತಿ, ಮತ, ಪಂಥ ಭೇದ ನೋಡದ, ಮೇಲು, ಕೀಳು, ಕಪ್ಪು, ಬಿಳುಪು, ಸ್ಪರ್ಷ –ಅಸ್ಪರ್ಷ ಇಲ್ಲದ ಮಾನವ ಕುಳ ಒಂದೆ ಎಂಬ ಸಂದೇಶವನ್ನು ಜಗತ್ತಿಗೆ ನೀಡಿ ವಿಶ್ವ ಮಾನವ ತತ್ವದ ಆಧಾರ ಮೇಲೆ ಕನ್ನಡದ ಧರ್ಮ ಸ್ಥಾಪನೆ ಮಾಡಿದ ಕ್ರಾಂತಿಯೋಗಿ ಬಸವಣ್ಣ ಜಗತ್ತಿಗೆ ಅತ್ಯಂತ ವೈಜ್ಞಾನಿಕ ಧರ್ಮ ನೀಡಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಈ ಧರ್ಮದಲ್ಲಿ ಸ್ವರ್ಗ, ನರಕ, ಪಾಪ, ಪುಣ್ಯದ ಹೆಸರಿಲ್ಲಿ ವ್ಯಾಪರಾವಿಲ್ಲ. ಭಾರತದಲ್ಲಿ ಬೌದ್ಧ ಧರ್ಮ ಬಿಟ್ಟರೆ ಅತ್ಯಂತ ವೈಜ್ಞಾನಿಕ ತಲಹದಿಯ ಮೇಲೆ ಹುಟ್ಟಿಕೊಂಡ ಇನ್ನೊಂದು ಧರ್ಮ ವೆಂದರೆ ಅದು ಬಸವ ಧರ್ಮ ಇಲ್ಲಿ ಕೂಡಲ ಸಂಗಮನೆ ಸಾಕ್ಷಿ ಪ್ರಜ್ಞೆ ಮಾನವ ಪ್ರೀತಿ ಹಾಗೂ ದಯೇ ಧರ್ಮದ ಮೂಲವಾಗಿರುವುದೆ ಬಸವ ಧರ್ಮದ ಹೆಗ್ಗಳಿಕೆ.

**ಬಸವಣ್ಣ ಮತ್ತು ಮಾನವ ಪ್ರೀತಿ :** ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ ಧರೆ ಹತ್ತಿ ಉರಿದಡೆ ನಿಲಲುಬಾರದು. ಏರಿ ನೀರುಂಬಡೆ, ಬೇಲಿ ಕೆಯ್ಯ ಮೇವಡೆ, ನಾರಿ ತನ್ನ ಮನೆಯಲ್ಲಿ ಕಳುವಡೆ, ತಾಯ ಮೊಲೆ ಹಾಲುನಂಜಾಗಿ ಕೊಲುವಡೆ ಇನ್ಯಾರಿಗೆ ದೂರುವೆ ಕೂಡಲ ಸಂಗಮ ದೇವ." ಜೀವನದಲ್ಲಿ ಪ್ರತಿಯೊಬ್ಬರು ಸಾಮಾಜಿಕ ವ್ಯವಸ್ಥೆಗೆ ಅನುಗುಣವಾಗಿ ತಮ್ಮ ಪಾಲಿನ ನಿರ್ದಿಷ್ಟ ಪಾತ್ರಗಳನ್ನು, ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ಸಮರ್ಪಕವಾಗಿ ನಿರ್ವಹಿಸದೆ ಹೋದಲ್ಲಿ ಇದೇ ಸಾಮಾಜಿಕ ವ್ಯವಸ್ಥೆ ಹೇಗೆ ಸಮಾಜಕ್ಕೆ ಕಂಕಟ ಪ್ರಾಯವಾಗಿ ಪರಿಣಮಿಸುತ್ತದೆ ಎನ್ನುವುದನ್ನು ಬಸವಣ್ಣನವರು ಈ ವಚನದಲ್ಲಿ ಬಹಳ ಅರ್ಥಪೂರ್ಣವಾಗಿ ವ್ಯಾಖ್ಯಾನಿಸಿದ್ದಾರೆ. ಇದು ಇಂದಿನ ಸಾಮಾಜಿಕ ಸ್ಥಿತಿಗೆ ಹಿಡಿದ ಕನ್ನಡಿಯಂತಿದೆ.

ಸ್ವಜನಪಕ್ಷಪಾತ, ಭ್ರಷ್ಟಾಚಾರ, ಹಿಂಸಾಚಾರ, ಭಯೋತ್ಪಾದನೆ ಮುಂತಾದ ಸಾಮಾಜಿಕ ಅನಿಷ್ಟಗಳಿಂದ ಕುಸಿಯುತ್ತಿರುವ ಮಾನವೀಯ ಮೌಲ್ಯಗಳ ಬಗ್ಗೆ ಬಸವಣ್ಣನವರು ತಮ್ಮ ನೋವನ್ನು ಈ ವಚನದಲ್ಲಿ ವ್ಯಕ್ತಪಡಿಸಿದ್ದಾರೆ.ಒಲೆ ಹತ್ತಿ ಉರಿದಾಗ ಅದನ್ನು ನಿಯಂತ್ರಿಸಬಹುದು ಆದರೆ ಭೂಮಿಯೇ ಹೊತ್ತಿಕೊಂದು ಉರಿಯಲು ಪ್ರಾರಂಭಿಸಿದಲ್ಲಿ ಜನರ ಗತಿ ಏನಾಗಬಹುದು? ಭೂಮಿಗೆ ನೀರುಣಿಸಬೇಕೆಂಬ ಗುರಿಯನ್ನು ಹೊಂದಿರುವ ಏರಿಯೇ ನೀರನ್ನು ಕುಡಿಯಲು ಆರಂಭಿಸಿದರೆ, ರೈತರ ಬೆಳೆಯನ್ನು ರಕ್ಷಿಸಬೇಕಾದ ಬೇಲಿಯೇ ಬೆಳೆಯನ್ನು ಭಕ್ಷಿಸಲು ಆರಂಭಿಸಿದರೆ, ಮನೆಯ ಒಡತಿಯೇ ತನ್ನ ಮನೆಯಲ್ಲಿ ಕಳ್ಳತನ ಮಾಡಿದರೆ, ತನ್ನ ಮಕ್ಕಳನ್ನು ತನ್ನ ಸ್ತನ್ಯಪಾನದಿಂದ ಸಲಹಬೇಕಾದ ಹೆತ್ತ ತಾಯಿಯ ಅಮೃತ ಸಮಾನವಾದ ಮೊಲೆ ಹಾಲೇ ವಿಷವಾದರೆ ಯಾರಿಗೆ ದೂರುವುದು? ಎಂದು ಭಗವಂತನಲ್ಲಿ ಪ್ರಶ್ನಿಸುತ್ತಾರೆ ಭಕ್ತಿ ಭಂಡಾರಿ ಬಸವಣ್ಣನವರು. ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿಯೂ ಇಂದು ಸಂಭವಿಸಿರುವ ಸಾಮಾಜಿಕ ಮೌಲ್ಯಗಳ ಅಧಃಪತನದ ಪ್ರಕ್ಷುಬ್ಧಸಮಾಜದ ನೈಜ ಚಿತ್ರಣಕ್ಕೆ ಹಿಡಿದ ಕನ್ನಡಿಯಂತಿದೆ ಈ ವಚನ.ವಿಶ್ವದ ಎಲ್ಲಾ



ದಾರ್ಶನಿಕರ ಶ್ರೇಷ್ಠವಾದ ಚಿಂತನೆಗಳನ್ನು ವಚನ ಸಾಹಿತ್ಯ ಎಂಬ ಶ್ರೇಷ್ಠವಾದ ಅನುಭಾವ ಸಾಹಿತ್ಯದ ಮೂಲಕ ಜಗತ್ತಿಗೆ ನೀಡಿದ ಹಿರಿಮೆ ಬಸವಾದಿ ಶರಣರಿಗೆ ಸಲ್ಲುತ್ತದೆ. ಜಾತ್ಯಾತೀತ ಸಮಾಜದ ಕಲ್ಪನೆ, ಸ್ತ್ರೀ ಸಮಾನತೆಯ ಪ್ರತಿಪಾದನೆ, ಕಾಯಕ ದಾಸೋಹ, ಸಿದ್ಧಾಂತಗಳ ಅನುಷ್ಠಾನ, ನಿಸರ್ಗದ ಬಗೆಗಿನ ಪ್ರೀತಿ, ವೈಚಾರಿಕ ಚಿಂತನೆಗಳಿಗೆ ಪ್ರೋತ್ಸಾಹ, ಜನರ ಧಾಂಬಿಕ ಬದುಕಿನ ಬಗ್ಗೆ ಎಚ್ಚರಿಗೆ, ಭಕ್ತಿಯೇ ಪ್ರಧಾನ ಎಂಬ ತತ್ವದ ಪ್ರತಿಪಾದನೆ ಎಲ್ಲರೂ ನನ್ನವರೆನ್ನುವ ವಿಶ್ವ ಭ್ರಾತೃತ್ವಭಾವ, ಎನಗಿಂತ ಕಿರಿಯರಿಲ್ಲ ಎಂಬ ವಿನಮ್ರ ಭಾವದಿಂದ ಜಗತ್ತನ್ನು ಬೆಳಗಿದ ಜಗದ ಜ್ಯೋತಿ, ಭಕ್ತಿ ಭಂಡಾರಿ ಶ್ರೇಷ್ಠ ಮಾನವತಾವಾದಿ, ಮಹಾನ್ ದಾರ್ಶನಿಕರು ಬಸವಣ್ಣನವರು. ಎಲ್ಲಕ್ಕಿಂತ ಮಿಗಿಲಾಗಿ ಶೋಷಣೆ ರಹಿತ ಸಮಾನತೆಯ ಸಮಾಜದ ಸೃಷ್ಟಿಗಾಗಿ ತಮ್ಮನ್ನು ತಾವೇ ಸಮರ್ಪಿಸಿಕೊಂಡ ಸಾಮಾಜಿಕ ಹರಿಕಾರ ಸುಧಾರಕ ಬಸವಣ್ಣನವರು. ಅವರು ಪ್ರತಿಪಾದಿಸಿದ ಜೀವನ ಮೌಲ್ಯಗಳು ಎಂದೆಂದಿಗೂ ಪ್ರಸ್ತುತ.

ಮನುಷ್ಯ ಆಧುನಿಕತೆಯನ್ನು ಮೈಗೂಡಿಸಿಕೊಂಡು, ವಿಶ್ವವೆ ಒಂದು ಹಳ್ಳಿಯಾಗಿ ಅಭಿವೃದ್ಧಿ ಹೊಂದಿರುವ ಈ ಕಾಲಘಟ್ಟದಲ್ಲಿ ಧರ್ಮ,ಜಾತಿ, ಭಾಷೆ, ಬಣ್ಣಗಳ ಹೆಸರಿನಲ್ಲಿ ದಿನ ನಿತ್ಯ ಕಚ್ಚಾಡುತ್ತ, ಯಾವುದನ್ನು ತಿನ್ನಬೇಕು, ಯಾವ ಬಟ್ಟೆ ದರಿಸಬೇಕು, ಯಾರನ್ನು ಮದುವೆಯಾಗ ಬೇಕು, ಯಾರೊಂದಿಗೆ ವ್ಯಾಪಾರ ಮಾಡಬೇಕು, ವಾಹನ ಚಾಲಕರು ಯಾರಾಗಿರಬೇಕು ಎಂದು ದಿನ ನಿತ್ಯ ವ್ಯಕ್ತಿಯ ವೈಯಕ್ತಿಕ ಜೀವನದಲ್ಲಿ ಕೈಯಾಡಿಸಿ ಸಮಾಜದ ಶಾಂತಿ ಕದಡುವ ಬೆಳವಣಿಗೆಗಳು ನಡೆಯುತ್ತಿರುವ

ಈ ದಿನಗಳಲ್ಲಿ ಜಾತಿ ವರ್ಗರಹಿತ ವಿಶ್ವಮಾನವ ಸಂದೇಶ ಸಾರಿದ ಬಸವಣ್ಣನವರ ಸಮ ಸಮಾಜದ ತತ್ವ ಸಿದ್ಧಾಂತಗಳು ಎಂದಿಗಿಂತ ಹೆಚ್ಚಾಗಿ ನಾವು ಜೀವನದಲ್ಲಿ ಅಳವಡಿಸಿಕೊಳ್ಳುವ ಅಗತ್ಯವಿದೆ.

ಬಸವಣ್ಣನವರು ಜಾತಿ ಜಾತಿಗಳ ಧರ್ಮ–ಧರ್ಮಗಳ ಹೆಸರಿನಲ್ಲಿ ನಡೆಯುತ್ತಿದ್ದ ಮಾನವ ಸಂಘರ್ಷವನ್ನು ಕುರಿತು ನೊಂದು ನುಡಿದ ಈ ವಚನ ಇಡೀ ವಿಶ್ವಕ್ಕೆ ನೀಡಿದ ಒಂದು ದಿವ್ಯ ಸಂದೇಶವಾಗಿದೆ. “ಇವನಾರವ, ಇವನಾರವ, ಇವನಾರವ ನೆಂದೆನಿಸದಿರಯ್ಯಾ ಇವ ನಮ್ಮವ, ಇವ ನಮ್ಮವ, ಇವ ನಮ್ಮವ ನೆಂದೆನಿಸಯ್ಯಾ ಕೂಡಲ ಸಂಗಮ ದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ ”ಮನುಷ್ಯನಾಗಿ ಹುಟ್ಟಿದ ಮೇಲೆ ಎಲ್ಲರೂ ಸರಿ ಸಮಾನರೇ ಎಲ್ಲರೂ ನಮ್ಮವರೆ “ಇವನು ಯಾರು ಇವನು ಯಾರು” ಎಂದು ಕೇಳುವುದು ಸರಿಯಲ್ಲ. ಇವನು ನಮ್ಮವನು ಇವನು ನಮ್ಮವನು ಎಂದು ಪ್ರೀತಿಯಿಂದ ಅಪ್ಪಿಕೊಳ್ಳಬೇಕೆಂಬ ಮಾನವ ಭ್ರಾತೃತ್ವದ ದಿವ್ಯ ಸಂದೇಶ ನೀಡಿದ ಬಸವಣ್ಣನವರು, ಮಾದಾರ ಚನ್ನಯ್ಯನನ್ನು ತನ್ನ ಅಪ್ಪನೆಂದು, ಡೋಹರ ಕಕ್ಕಯ್ಯನನ್ನು ತನ್ನ ದೊಡ್ಡಪ್ಪನೆಂದು, ಕಿನ್ನರ ಬೊಮ್ಮಯ್ಯನನ್ನು ತನ್ನ ಅಣ್ಣನೆಂದು ಸಂಬೋಧಿಸುವ ಮೂಲಕ ಅವರಲ್ಲಿ ಆತ್ಮವಿಶ್ವಾಸ ಹಾಗೂ ಸ್ವಾಭಿಮಾನದ ಶಕ್ತಿಯನ್ನು ತುಂಬಿದ ಹಿರಿಮೆ ಅಣ್ಣ ಬಸವಣ್ಣನವರಿಗೆ ಸಲ್ಲುತ್ತದೆ. ದಲಿತರ ಬಗ್ಗೆ ಅವರಿಗಿದ್ದ ಸಹಜ ಪ್ರೀತಿ ಹಾಗೂ ಗೌರವಕ್ಕೆಅವರ ಈ ಅಭಿಮಾನದ ಮಾತು ಸಾಕ್ಷಿಯಾಗಿದೆ.

ಹನ್ನೆರಡನೆಯ ಶತಮಾನ ವಿಶ್ವದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹುದು. ಕರ್ನಾಟಕದಲ್ಲಿ ಬಸವಾದಿ ಶರಣರ ದಿವ್ಯ ಮಾರ್ಗದರ್ಶನದಲ್ಲಿ ಮಾನವ ಕಲ್ಯಾಣ ದಿಸೆಯಲ್ಲಿ ನಡೆದ ಸಮರ, ಕ್ರಾಂತಿ ವಿಶ್ವದ ಯಾವುದೇ ಭಾಗದಲ್ಲಿ ಒಮ್ಮೆಲೇ ನಡೆದ ನಿದರ್ಶನಗಳೇ ಇಲ್ಲ. ವಿಶ್ವದಲ್ಲಿ ಕಾಲಕಾಲಕ್ಕೆ ಅನೇಕ ರೀತಿಯ ಕ್ರಾಂತಿಗಳಾಗಿವೆ. ಆ ಯಾವ ಕ್ರಾಂತಿಯೂ ಈ ಶರಣರು ಮಾಡಿದಂತಹ ಸಮಗ್ರ ಕ್ರಾಂತಿಯನ್ನು ಹೋಲಲು ಸಾಧ್ಯವಿಲ್ಲ. ಇದಕ್ಕೆ ಮೂಲ ಕಾರಣ ಮಾನವ ಸಮುದಾಯದ ಎಲ್ಲಾ ಕ್ಷೇತ್ರಗಳ ಸದಾಶಯಗಳಿಗೆ ಸ್ಪಂದಿಸುವಂತಹ ಕ್ರಾಂತಿಗೆ ನಾಂದಿ ಹಾಡಿದವರು ಬಸವಾದಿ ಶರಣರು.

ಧಾರ್ಮಿಕ, ಆರ್ಥಿಕ, ಸಾಹಿತ್ಯಿಕ, ನೈತಿಕ ಹಾಗೂ ಸಾಮಾಜಿಕ ಹೀಗೆ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅವರ ಕ್ರಾಂತಿಕಾರರ ವಿಚಾರಧಾರೆ ಅತ್ಯಂತ ಪ್ರಖರವಾಗಿ ಮಾನವೀಯ ನೆಲೆಯಲ್ಲಿ ಹರಿದುಬಂದದ್ದು ಒಂದು ವಿಸ್ಮಯವೇ ಸರಿ. ಇದಕ್ಕೆ ಮೂಲ ಪ್ರೇರಣೆಯಾದದ್ದು ಬಸವಾದಿ ಶರಣರ ದಾರ್ಶನಿಕ ಚಿಂತನೆಗಳು. ಅವರು ಪ್ರತಿಪಾದಿಸಿದ ಮಾನವೀಯ ಜೀವನ ಮೌಲ್ಯಗಳು. ವಿಶಿಷ್ಟವಾದ ವೈಚಾರಿಕ ನೆಲೆಯಲ್ಲಿ ಮಾನವ ಬದುಕನ್ನು ಕಂಡಂತಹ ಅವರ ವಿಶಿಷ್ಟವಾದ ಧೋರಣೆಗಳು, ಸಮಗ್ರ ಕ್ರಾಂತಿಯ ಮೂಲಕ ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದ ಅವರ ಉದಾತ್ತ ಜೀವನ ಸಿದ್ಧಾಂತಗಳು.ಬಸವಣ್ಣನವರ ಮಹಾನ್ ದಾರ್ಶನಿಕ ಮಾರ್ಗದರ್ಶನದಲ್ಲಿ ನಾಡಿನ, ರಾಷ್ಟ್ರದ ಮೂಲೆ ಮೂಲೆಗಳಿಂದಲೂ ಶರಣ ತತ್ವಗಳಿಂದ ಆಕರ್ಷಿತರಾಗಿ ನೂರಾರು ಶರಣರು ಏಕಕಾಲಕ್ಕೆ ಬಂದದ್ದು ಒಂದು ಐತಿಹಾಸಿಕ ಘಟನೆ. ಶರಣರ ಆಗಮನದಿಂದ ಕಲ್ಯಾಣದಲ್ಲಿ ನಡೆದಂತಹ ಒಂದು ವಿನೂತನವಾದ ಸಮರ ಕ್ರಾಂತಿಗೆ ಸ್ಫೂರ್ತಿಯ ಸೆಲೆಯಾಗಿದ್ದ ಬಸವಣ್ಣನವರ ದರ್ಶನದಿಂದ ನನ್ನ ಬದುಕು ಸಾರ್ಥಕವಾಯಿತು ಎನ್ನುವ ಅಲ್ಲಮಪ್ರಭುಗಳ ಈ ವಚನವು ಬಸವಣ್ಣನವರ ದಿವ್ಯ ವ್ಯಕ್ತಿತ್ವವಕ್ಕೆ ಹಿಡಿದ ಕನ್ನಡಿಯಂತಿದೆ."ಕಲ್ಯಾಣವೆಂಬ ಪ್ರಣತಿಯಲ್ಲಿ, ಭಕ್ತಿರಸವೆಂಬ ತೈಲವನೆರೆದು ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು ತೊಳಗಿ ಬೆಳಗುತ್ತಿದ್ದಿತ್ತಯ್ಯಾ ಶಿವನ ಪ್ರಕಾಶ ಆ ಬೆಳಗಿನೊಳಗೆ ಒಪ್ಪುತ್ತಿದ್ದರಯ್ಯ ಅಸಂಖ್ಯಾತ ಭಕ್ತಗಣಂಗಳು ಶಿವಭಕ್ತರಿದ್ದ ಕ್ಷೇತ್ರ ಅವಿಮುಕ್ತ ಕ್ಷೇತ್ರವೆಂಬುದು ಹುಸಿಯೆ? ಶಿವಭಕ್ತರಿದ್ದ ದೇಶ ಪಾವನವೆಂಬುದು ಹುಸಿಯೆ? ಗುಹೇಶ್ವರಲಿಂಗದಲ್ಲಿ ಎನ್ನ ಪರಮಾರಾಧ್ಯ ಸಂಗನ ಬಸವಣ್ಣನ ಕಂಡು ಬದುಕಿದೆನು ಕಾಣಾ, ಸಿದ್ಧರಾಮಯ್ಯ"



**ಅನುಭವ ಮಂಟಪ :** ಬಸವಾದಿ ಶರಣರು ತಮ್ಮ ಎಲ್ಲಾ ಶರಣ ಸಮೂಹದೊಂದಿಗೆ ಅನುಭಾವದ ಬಗ್ಗೆ ಚಿಂತನೆ, ವಿಚಾರ ವಿನಿಮಯ ಮತ್ತು ಸಂವಾದಕ್ಕಾಗಿ ನಿರ್ಮಿಸಿಕೊಂಡಿದ್ದ ಒಂದು ಚಿಂತನೆಯ ವೇದಿಕೆಯೇ ಅನುಭವ ಮಂಟಪ, ಇದೊಂದು ಜ್ಞಾನದ ಪೀಠ. ಕಾಯಕ ಭೇದವಿಲ್ಲದೆ, ಲಿಂಗಭೇದವಿಲ್ಲದೆ, ಜಾತ್ಯತೀತ ನೆಲೆಯಲ್ಲಿ ಶರಣರೆಲ್ಲರೂ ಕೂಡಿ ತಮ್ಮ ತಮ್ಮ ದಿನ ನಿತ್ಯದ ಕಾಯಕ ಮತ್ತು ಬದುಕಿನ ಅನುಭಾವದ ಸಂವೇದನೆಯ ಹಿನ್ನಲೆಯಲ್ಲಿ ನಿರ್ಭೀತವಾಗಿ ನಡೆಸುತ್ತಿದ್ದ ಶರಣರ ಆಧ್ಯಾತ್ಮಿಕ ಚಿಂತನೆಗಳ ಒಂದು ಪ್ರಜಾಸತ್ತಾತ್ಮಕ ಕೇಂದ್ರವೇ ಅನುಭವ ಮಂಟಪ. ಈ ಅನುಭವ ಮಂಟಪವೇ ವಿಶ್ವದ ಮೊದಲ ಪಾರ್ಲಿಮೆಂಟ್ ಎಂದು ವಿಮರ್ಶಕರಿಂದ ಬಣ್ಣಿಸಲಾಗಿದೆ.

**ಜೀವನ ಸಂವಿಧಾನ :** ಬಸವಣ್ಣನವರ ಕ್ರಾಂತಿಗೆ ಮೂಲ ಆಧಾರವಾದಂತಹ ಈ ವಚನ ಇಡೀ ವಿಶ್ವ ಸಮುದಾಯಕ್ಕೆ ನೀಡಿದಂತಹ ಒಂದು ಸಾಮಾಜಿಕ ನೀತಿ ಸಂಹಿತೆ. ಜಗತ್ತಿನ ಮನುಕುಲಕ್ಕೆ ನೀಡಿದಂತಹ ಜೀವನ ಸಂವಿಧಾನ, ಮಾನವ ಸಂವಿಧಾನ.“ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ,ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡತನ್ನ ಬಣ್ಣಿಸಬೇಡ, ಇದಿರಹಳಿಯಲು ಬೇಡ ಇದೇ ಅಂತರಂಗ ಶುದ್ದಿ, ಇದೇ ಬಹಿರಂಗ ಶುದ್ಧಿಇದೇ ನಮ್ಮ ಕೂಡಲ ಸಂಗಮ ದೇವರನೊಲಿಸುವ ಪರಿ"

**ಸ್ತ್ರೀ ಸಮಾನತೆ :** ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಹೆಣ್ಣಿನ ಬಗ್ಗೆ ಅತ್ಯಂತ ಅಭಿಮಾನದಿಂದ ದನಿ ಎತ್ತಿದ್ದಾರೆ. ಹೆಣ್ಣಿನ ಬಗ್ಗೆ ಭಾರತೀಯ ವೈದಿಕ ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿದ್ದ



ಕೀಳುಭಾವನೆಯನ್ನು, ಅಸಮಾನತೆಯನ್ನು ಬಸವಣ್ಣನವರ ಈ ಚಳವಳಿ ತೊಡೆದು ಹಾಕಿದೆ. ಹೆಣ್ಣು ಮಾಯೆಯಲ್ಲ, ಆತ್ಮಕ್ಕೆ ಲಿಂಗಭೇದವಿಲ್ಲ, ಹೆಣ್ಣು ಅಸ್ಪೃಶ್ಯಳಲ್ಲ. ಹೆಣ್ಣು ಪ್ರತ್ಯಕ್ಷ ದೇವತೆ, ಪರಸ್ತ್ರೀ ಪಾರ್ವತಿಯ ಸಮಾನ ಎಂದು ಸಾರುವ ಮೂಲಕ ಸ್ತ್ರೀ ಸಮಾನತೆಯನ್ನು ಪ್ರತಿಪಾದಿಸಿದ ಹಿರಿಮೆ ಬಸವಣ್ಣನವರಿಗೆ ಮತ್ತು ಅವರ ಸಮಕಾಲೀನ ಶರಣರಿಗೆ ಸಲ್ಲುತ್ತದೆ.ವೈದಿಕ ವರ್ಣಾಶ್ರಮ ವ್ಯವಸ್ಥೆ ಮತ್ತು ಪಿತೃಪ್ರಧಾನ ಕುಟುಂಬ ಪದ್ಧತಿಗಳಿಂದಾಗಿ ಸಮಾಜದಲ್ಲಿ ಸ್ತ್ರೀಗೆ ಉಂಟಾಗಿದ್ದ ಅಸಮಾನತೆ, ಶೋಷಣೆಗಳನ್ನು ಕಂಡು ವಚನಕಾರರು ಕಿಡಿಕಾರಿ ಸಮಾನತೆಯ ಸಮಾಜವನ್ನು ನಿರ್ಮಿಸುವಲ್ಲಿ ಪ್ರಯತ್ನ ನಡೆಸಿದ್ದಾರೆ. ಪ್ರಾಪಂಚಿಕ ಹಾಗೂ ಪರಮಾರ್ಥಿಕ ಎರಡು ನೆಲೆಗಳಲ್ಲಿಯೂ ಹೆಣ್ಣನ್ನು ಸಮಾನ ಅವಕಾಶಗಳೊಂದಿಗೆ ಪರಿಗಣಿಸಿದ್ದಾರೆ. ಈ ವಚನ ಚಳವಳಿಯಲ್ಲಿ ಸುಮಾರು 35 ವಚನಕಾರ್ತಿಯರು ಸುಮಾರು 1351 ವಚನಗಳನ್ನು ಬರೆದಿರುವುದಾಗಿ ಡಾ. ವೀರಣ್ಣ ರಾಜೂರ ಅವರು ತಿಳಿಸುತ್ತಾರೆ. 12ನೆಯ ಶತಮಾನದಲ್ಲಿ ಒಮ್ಮೆಗೇ ಇಷ್ಟು ಜನ ಮಹಿಳೆಯರು ಸಾಹಿತ್ಯ ಕ್ಷಿತಿಜದ ಮೇಲೆ ಕಾಣಿಸಿಕೊಂಡದ್ದು ಪರಮ ಆಶ್ಚರ್ಯ ಎಂದು ಅವರು ಅಭಿಪ್ರಾಯಪಡುತ್ತಾರೆ. ಬಸವಣ್ಣನವರ ನಾಯಕತ್ವದಲ್ಲಿ ನಡೆದ ಚಳವಳಿಯು ಹೆಣ್ಣಿನ ಸ್ಥಾನಮಾನದ ಬಗ್ಗೆ ಅಂದು ತಳೆದ ನಿಲುವು ಇಂದಿನ ಸಮಾಜಕ್ಕೆ ಮಾದರಿ ಸ್ವರೂಪದಲ್ಲಿದೆ.

**ಕಾಯಕ ತತ್ವ :** ಬಸವಣ್ಣನವರು ಪ್ರತಿಪಾದಿಸಿದ ಬಹು ದೊಡ್ಡ ಆರ್ಥಿಕ ಸೂತ್ರವೆಂದರೆ ಕಾಯಕತತ್ವ. ಬಸವಣ್ಣನವರ ದೃಷ್ಟಿಯಲ್ಲಿ ಪ್ರತಿಯೊಬ್ಬ ಶರಣನಿಗೂ ಕಾಯಕ ಅನಿವಾರ್ಯ. ಕಾಯಕವಿಲ್ಲದೆ ಗುರು ಲಿಂಗ ಜಂಗಮರಿಗೂ ಮುಕ್ತಿಯಿಲ್ಲ ಎಂಬ ಹಾಗೂ "ಕಾಯಕವೇ ಕೈಲಾಸ" ಎಂಬ ಸಿದ್ಧಾಂತದ ಪ್ರತಿಪಾದನೆಗೆ ಬಸವಣ್ಣನವರೇ ನಿಜವಾದ ಸ್ಫೂರ್ತಿಯಾಗಿದ್ದರು. ಕಾಯಕವು ಎಷ್ಟು ಮುಖ್ಯವೋ ಶರಣರು ಕೈಗೊಳ್ಳುವ ಕಾಯಕಕ್ಕೆ ಅವರು ಅಷ್ಟೇ ಗೌರವ ನೀಡಬೇಕು. ಕಾಯಕದಲ್ಲಿ ಮೇಲು ಕೀಳು ಎಂಬ ಭಾವ ಸಲ್ಲದು. ಶರಣರು ಮಾಡುವ ಕಾಯಕವು ಸತ್ಯ ಶುದ್ಧವಾಗಿರಬೇಕು, ಸಮಾಜಮುಖಿಯಾಗಿರಬೇಕು ಎಂಬುದು ಬಸವಣ್ಣನವರ ಅಚಲವಾದ ನಂಬಿಕೆ. ಈ ವಚನವು ಈ ಆಶಯವನ್ನು ಪ್ರತಿಪಾದಿಸುತ್ತದೆ."ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲವೆ, ಸತ್ಪಾತ್ರಕ್ಕೆ ಸಲ್ಲದಯ್ಯ,ನಾಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯ,ನಮ್ಮ ಕೂಡಲಸಂಗನ ಶರಣರಿಗಲ್ಲದಮಾಡುವ ಅರ್ಥ ವ್ಯರ್ಥ ಕಂಡಯ್ಯ"ಇಲ್ಲಿ ಕೂಡಲ ಸಂಗನ ಶರಣರು ಎಂದರೆ ನಮ್ಮ ಸುತ್ತ ಇರುವ ಸಮಾಜ ಸಮಾಜದಲ್ಲಿನನೊಂದವರ ಬಗ್ಗೆ ಹಸಿದವರಿಗಾಗಿ ನಮ್ಮ ಕಾಯಕದ ಫಲ ದೊರಕಬೇಕು.

**ದಾಸೋಹ ಸಿದ್ಧಾಂತ :** ಬಸವಣ್ಣನವರ ದೃಷ್ಟಿಯಲ್ಲಿ ದಾಸೋಹ, ಪ್ರೀತಿ, ಪರಸ್ಪರ ಗೌರವದಿಂದ ದಾಸೋಹದ ಫಲಪಡೆಯುವವರ ಆತ್ಮಾಭಿಮಾನಕ್ಕೆ ಧಕ್ಕೆ ಆಗದ ಹಾಗೆ ನೀಡುವವರ ಹಾಗೂ ಪಡೆಯುವವರ ನಡುವೆ ಸಮಾನತೆಯ ಸ್ವಾಭಿಮಾನದಿಂದ ನಡೆಯಬೇಕಾದ ಒಂದು ಸಾಮಾಜಿಕ ಕರ್ತವ್ಯ. ಅವರ ದಾಸೋಹ ಸಿದ್ಧಾಂತದಲ್ಲಿ ಧಾರ್ಮಿಕ ಭಾವ ಹಾಗೂ ಆರ್ಥಿಕ ಚಿಂತನೆ ಎರಡೂ ಅಡಗಿವೆ. ತಾನು ಕಾಯಕದಿಂದ ಗಳಿಸಿದ ಧನವು ಲೋಕ ಕಲ್ಯಾಣದ ದಾಸೋಹ ಕಾರ್ಯದಲ್ಲಿ ಸಂಪೂರ್ಣವಾಗಿ ಸವೆಯಬೇಕೆಂಬುದು ಅವರ ಸದಾಶಯ."ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಬಳಗವನು?ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವನೆಲ್ಲವ?ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಕಾಗೆ ಕೋಳಿಯಿಂದ ಕರಕಷ್ಟಕೂಡಲಸಂಗಮದೇವಾ."ಹಂಚಿಕೊಂಡು ತಿನ್ನುವ ದಾಸೋಹ ಭಾವ ಪ್ರಾಣಿ ಪಕ್ಷಿಗಳಲ್ಲಿ ಇರುವುದನ್ನು ಬಸವಣ್ಣನವರು ಗುರುತಿಸುತ್ತಾರೆ. ಪ್ರಾಣಿ ಪಕ್ಷಿಗಳಲ್ಲಿ ಇರುವ ಹಂಚಿಕೊಂಡು ತಿನ್ನುವ ಸಹಬಾಳ್ವೆಯ ಭಾವನೆ ಬುದ್ಧಿ ವಿವೇಚನೆ ಉಳ್ಳ ಮಾನವನಲ್ಲಿ ಇಲ್ಲವಲ್ಲ ಎಂಬ ತಮ್ಮ ವಿಷಾದವನ್ನು ಈ ವಚನದ ಮೂಲಕ ಅಭಿವ್ಯಕ್ತಿಗೊಳಿಸಿದ್ದಾರೆ ಮಹಾ ದಾಸೋಹಿ ಬಸವಣ್ಣನವರು. "ಜನ್ಮ ಜನ್ಮಕ್ಕೆ ಹೋಗಲೀಯದೆ,'ಸೋಹಂ' ಎಂದೆನಿಸದೆ' ದಾಸೋಹಂ' ಎಂದೆನಿಸಯ್ಯಾ ಲಿಂಗಜಂಗಮ ಪ್ರಸಾದದ ನಿಲವ ತೋರಿ ಬದುಕಿಸಯ್ಯಾಕೂಡಲ ಸಂಗಮದೇವಾ ನಿಮ್ಮ ಧರ್ಮ"ಜನ್ಮ ಜನ್ಮಗಳ ಹಿಂದೆ ಹೋಗದೆ ನಾನೇ ಸರ್ವಸ್ವವೆಂದು ಅಹಮ್ಮನ್ನು ತೋರದೆ ದಾಸೋಹದಲ್ಲಿ ನಿರತನಾಗಿ ಲಿಂಗಜಂಗಮ ಪ್ರಸಾದದ ಮಹಿಮೆಯನ್ನು ತೋರಬೇಕೆಂಬ ನಿಲುವು

**ಬಸವಣ್ಣನವರದು ಸಮಾಜವಾದದ ಪ್ರತಿಪಾದನೆ :** "ಹೊನ್ನಿನೊಳ ಗೊಂದೆರೆಯ ಸೀರೆಯೊಳಗೊಂದೆಳೆಯ, ಅನ್ನದೊಳದೊಂದುಗುಳ ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ,ನಿಮ್ಮಾಣೆ, ನಿಮ್ಮ ಪ್ರಮಥರಾಣೆ,ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ ಕೂಡಲ ಸಂಗಮದೇವ."ಅಂದು ದುಡಿದದ್ದನ್ನು ಅಂದಂದಿಗೇ ಬಳಸಬೇಕು. ನಾಳೆಗೆ ಬೇಕು ಎಂದು ಚಿಂತಿಸಬಾರದು ಎನ್ನುವ ಮೂಲಕ ಅನಗತ್ಯವಾಗಿ ಭವಿಷ್ಯಕ್ಕೆ ಬೇಕೆಂದು ಆಸೆಯಿಂದ ಸಂಪತ್ತನ್ನು ಸಂಗ್ರಹಿಸಿ ಇಡುವ ಪ್ರವೃತ್ತಿಯು ಶರಣರ ದೃಷ್ಟಿಯಲ್ಲಿ ಒಂದು ಸಾಮಾಜಿಕ ದ್ರೋಹವಿದ್ದಂತೆ. ಇಂತಹ ಸಾಮಾಜಿಕ ಬದುಕಿನ ನೀತಿ ಸಂತೆಯನ್ನು ಪ್ರತಿಪಾದನೆ ಮಾಡಿದ ಶರಣರಿಗೆ ದಿನ ನಿತ್ಯದ ಕಾಯಕ ಅನಿವಾರ್ಯವಾದಂತೆ ಸಮರ್ಪಣಾ ಭಾವದಿಂದ ಸಮಾಜಕ್ಕೆ ಮಾಡುವ ದಾಸೋಹವು ಸಹಾ ಅಷ್ಟೇ ಅನಿವಾರ್ಯವಾದದ್ದು ಎಂಬುದು ಅವರ ಸಮಾಜವಾದಿ ಸಮಾಜಮುಖಿ ಚಿಂತನೆಗೆ ಹಿಡಿದ ಕನ್ನಡಿಯಂತಿದೆ.

### ಗ್ರಾಮೀಣ ಪ್ರದೇಶದ ಚಿಕ್ಕ ವ್ಯಾಪಾರಸ್ಥರ, ಕೂಲಿ ಕಾರ್ಮಿಕರ ಮತ್ತು ರೈತರ ಆರ್ಥಿಕ ಶಕ್ತಿ

# 25 ವರ್ಷಗಳ ಸಂತೃಪ್ತ ಸೇವೆ – ಬೆಳ್ಳಿ ಮಹೋತ್ಸವ ಸಂಭ್ರಮದಲ್ಲಿ ಸಂಶಿ ಅರ್ಬನ್ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಸಂಶಿ

ಭಾರತದಲ್ಲಿ ಕರ್ನಾಟಕವು ಸಹಕಾರ ಆಂದೋಲನದ ಜನ್ಮಭೂಮಿಯಾಗಿದೆ. "ಸಹಕಾರ" ಎಂಬ ಪದವೇ ಒಟ್ಟಿಗೆ ಕೆಲಸ ಮಾಡು ಎಂಬುದಾಗಿದೆ. ಪರಸ್ಪರ ಸಹಕಾರ ಮತ್ತು ಸಹಬಾಳ್ವೆಯ ತತ್ವದ ಮೇಲೆ ರೂಪುಗೊಂಡಿರುವ ಸಹಕಾರ ಕ್ಷೇತ್ರ ದೇಶದ ಅರ್ಥ ವ್ಯವಸ್ಥೆಗೂ ಶಕ್ತಿ ತುಂಬಿದೆ. ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಮಧ್ಯಭಾಗದಲ್ಲಿ ಬರುವ ತಾಲೂಕಿನ ಅತಿದೊಡ್ಡ ಗ್ರಾಮ ಸಂಶಿ.

ಇಲ್ಲಿ ಸಹಕಾರ ತತ್ವದಡಿ ಪ್ರಾರಂಭವಾದ ಸಂಶಿ ಅರ್ಬನ್ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಕಳೆದ 25 ವರ್ಷಗಳಿಂದ ಆರ್ಥಿಕವಾಗಿ ಅಬಲರಾದವರಿಗೆ ನೆರವಾಗಿ ಅವರನ್ನು ಸ್ವಾವಲಂಬಿಗಳಾಗಿಸುವ ಜೊತೆಗೆ ಆ ಸದಸ್ಯರಲ್ಲಿ ಉಳಿತಾಯ ಮನೋಭಾವನೆ ಬೆಳಸಿ, ಅವರನ್ನು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಪ್ರೋತ್ಸಾಹ ನೀಡುತ್ತಿದೆ.

**ಸಂಸ್ಥೆಯ ಪ್ರಾರಂಭ :** ದಿನಾಂಕ 14.08.1999 ರಂದು ಕೇವಲ ರೂ. 407300/- ಶೇರು ಬಂಡವಾಳದೊಂದಿಗೆ 503 ಜನ ಸದಸ್ಯರೊಂದಿಗೆ ಸುತ್ತಮುತ್ತಲಿನ ಜನತೆಯ ಆರ್ಥಿಕ ಹಾಗೂ ವ್ಯವಹಾರದ ಅಭಿವೃದ್ಧಿಯನ್ನು ಗಮನದಲ್ಲಿರಿಸಿಕೊಂಡು ಸಾಮಾನ್ಯ ಜನರಿಗೆ ಹಣಕಾಸಿನ ಸಹಾಯ ಸರಳ ರೂಪದಲ್ಲಿ ಸಿಗುವ ಉದ್ದೇಶದಿಂದ ಸಮಾನ ಮನಸ್ಕರು ಸೇರಿ ಡಿ.ವ್ಹಿ. ಸುಂಕದ ಹಾಗೂ ಎಂ.ಪಿ. ಕೋರಿ ಇವರ ನೇತೃತ್ವದಲ್ಲಿ ಇವರನ್ನು ಒಳಗೊಂಡು 13 ಜನ ಪ್ರವರ್ತಕರು ಸೇರಿ ಸಂಶಿ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿಯನ್ನು ಪ್ರಾರಂಭಿಸಲಾಯಿತು.

ಸಂಸ್ಥೆಯ ಉದ್ದೇಶಿತ ಗುರಿಯನ್ನು ಪ್ರಾರಂಭದಿಂದ ಇಲ್ಲಿಯವರೆಗೆ ಸಾಧಿಸುತ್ತಾ, ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ 6 ಶಾಖೆಯನ್ನು ತೆರೆದು ಚಿಕ್ಕ ವ್ಯಾಪಾರಸ್ಥರು, ಕೂಲಿಕಾರ್ಮಿಕರು, ಬಡಜನರು ಹಾಗೂ ರೈತರನ್ನು ಹೆಚ್ಚಾಗಿ ಗಮನಿಸುತ್ತಾ ಅವರ ಬೇಡಿಕೆಯನ್ನು ಈಡೇರಿಸುತ್ತಾ



ಹಾಗೂ ಅವರ ಬೇಡಿಕೆಗೆ ಅನುಸಾರವಾಗಿ ಯೋಜನೆಯನ್ನು ರೂಪಿಸಿ ಸೇವೆಯನ್ನು ನೀಡುತ್ತಾ ಪ್ರಸ್ತುತ 4964 ಜನ ಸದಸ್ಯರ ಬಲದೊಂದಿಗೆ ಸುಮಾರು 3450 ಜನ ಸದಸ್ಯರಿಗೆ ಸಾಲ ಸೌಲಭ್ಯವನ್ನು ನೀಡಿ ಉದ್ದೇಶಿತ ಯಶಸ್ಸನ್ನು ಸಾಧಿಸಿದೆ ಅಂತ ಹೇಳಬಹುದು.

ಸಂಸ್ಥೆಯ 25 ವರ್ಷದ ಅವಧಿಯಲ್ಲಿ ಪ್ರತಿ ವರ್ಷವು ಉತ್ತಮ ವ್ಯವಹಾರದ ಬೆಳವಣಿಗೆಯನ್ನು ಸಾಧಿಸುತ್ತಾ ಬಂದಿದೆ. ಪ್ರತಿ ವರ್ಷವು ಸಹ ಗಮನಾರ್ಹ ಲಾಭವನ್ನು ಗಳಿಸುವ ಮೂಲಕ ಸದಸ್ಯರ, ಗ್ರಾಹಕರ ವಿಶ್ವಾಸವನ್ನು ಉಳಿಸಿಕೊಂಡು ಬೆಳ್ಳಿ ಹಬ್ಬದ ಸಂಭ್ರಮಕ್ಕೆ ಪಾತ್ರವಾಗಿದೆ.

**ಮೊಬೈಲ್ ವ್ಯಾನ್ ಬ್ಯಾಂಕಿಂಗ್ ಸೇವೆ :** ಸಂಸ್ಥೆಯಿಂದ ಮೂಲಭೂತ ಸೌಕರ್ಯವಂಚಿತ ಗ್ರಾಮಗಳನ್ನು ಗುರಿಯಾಗಿಸಿಕೊಂಡು, ಬ್ಯಾಂಕಿಂಗ್ ಸೇವೆ ವಂಚಿತ ಗ್ರಾಮವನ್ನು ಗುರುತಿಸಿ ಅಲ್ಲಿಯ ಪ್ರದೇಶದ ಜನರ ಆರ್ಥಿಕ ಸಬಲತೆಗಾಗಿ ಸಂಸ್ಥೆಯಿಂದ 2014ನೇ ಅವಧಿಯಲ್ಲಿ ಇಲಾಖೆಯ ಅನುಮತಿಯೊಂದಿಗೆ ಸಂಚಾರಿ ಬ್ಯಾಂಕಿಂಗ್ ಸೇವೆಯನ್ನು ಕರ್ನಾಟಕ ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಮೊದಲ ಬಾರಿಗೆ ನಮ್ಮ ಸಂಸ್ಥೆಯಿಂದ ಪ್ರಾರಂಭಿಸಿ ಅಲ್ಲಿಯ ಜನರಿಗೆ ಮನೆ ಬಾಗಿಲಿಗೆ ಹೋಗಿ ಬ್ಯಾಂಕಿಂಗ್ ಸೇವೆಯನ್ನು ಆರ್ಥಿಕವಾಗಿ ಹಿಂದುಳಿದ ಜನ ಸಾಮಾನ್ಯರಿಗೆ ಆರ್ಥಿಕ ಚೈತನ್ಯ ತುಂಬುವ ಕೆಲಸವನ್ನು ನೀಡುತ್ತಾ ಬರುತ್ತಿದೆ.





**ಚಿನ್ನಾಭರಣ ಯೋಜನೆ (ಸದಸ್ಯರಿಗೆ ಬಂಗಾರ ಆಭರಣ ಖರೀದಿ ಯೋಜನೆ) :** ಸಂಸ್ಥೆಯ ಸದಸ್ಯರಿಗೆ ಬಂಗಾರ ಅಡವಿಟ್ಟು ಸಾಲ ನೀಡುವುದರೊಂದಿಗೆ ಸದಸ್ಯರು ತಾವು ಇಷ್ಟ ಪಟ್ಟ ಬಂಗಾರ ದಾಗೀಣುಗಳನ್ನು ತಾವು ಬಯಸಿದ ಅಂಗಡಿಯಲ್ಲಿ ಖರೀದಿಸಲು ರೂಪಿಸಿದ ಯೋಜನೆ ಇದರಿಂದ ಸದಸ್ಯರಿಗೆ ತುಂಬಾ ಸಹಕಾರಿಯಾಗಿದೆ.



**ಬಜಾರ್ ಲೋನ್ :** ಸಂಸ್ಥೆಯು ವ್ಯವಹರಿಸುವ ಸ್ಥಳದಲ್ಲಿ ನಡೆಯುವ ಸಂತೆಯಲ್ಲಿ ವ್ಯಾಪಾರ ಮಾಡುವ ವ್ಯಾಪಾರಸ್ಥರಿಗೆ ಅನುಕೂಲವಾಗುವ ಉದ್ದೇಶದಿಂದ ಸಾಲ ನೀಡಿ ಅತೀ ಕಡಿಮೆ ಬಡ್ಡಿದರ ಆಕರಿಸಿ ಹಾಗೂ ಪ್ರತಿ ವಾರ ಕಂತುಗಳ ಮುಖಾಂತರ ಮರುಪಾವತಿಯ ಯೋಜನೆ ರೂಪಿಸಿದ್ದು ಅತೀ ಸಣ್ಣ ವ್ಯಾಪಾರಸ್ಥರಿಗೆ ತುಂಬಾ ಅನುಕೂಲವಾಗಿದೆ.

**ಸಂಸ್ಥೆಯ ಸೇವೆಗಳು**


- ಸೇಫ್ ಡಿಪಾಸಿಟ್ ಲಾಕರ್ ಸೌಲಭ್ಯ, ● ಆರ್‌ಟಿಜಿಎಸ್,
- ಎನ್‌ಇಎಫ್‌ಟಿ ಸೌಲಭ್ಯ ● ಇ–ಸ್ಟಾಂಪ್ ಸೌಲಭ್ಯ,
- ಪಾನ್‌ಕಾರ್ಡ್ ಸೌಲಭ್ಯ ● ಯಶಸ್ವಿನಿ ಯೋಜನೆ.

**ಸಂಸ್ಥೆಗೆ ಲಭಿಸಿದ ಪ್ರಶಸ್ತಿಯ ಹಿರಿಮೆಗಳು :**

1) 2007–08ನೇ ಸಾಲಿನಲ್ಲಿ ಕುಂದಗೋಳ ತಾಲೂಕಿನಲ್ಲಿ ಅತ್ಯಧಿಕ ಯಶಸ್ವಿನಿ ನೋಂದಾಯಿಸಿದ ಸಂಸ್ಥೆಯಂತ ಪ್ರಶಸ್ತಿ
2) 2014 ರಲ್ಲಿ ಜಿಲ್ಲಾಮಟದಲ್ಲಿ ಶ್ರೇಷ್ಠ ಸಹಕಾರ ಸಂಘ ಪ್ರಶಸ್ತಿ
3) 2014ರ 61ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದಿಂದ 'ಅತ್ಯುತ್ತಮ ಸಹಕಾರ ಸಂಘ' ಪ್ರಶಸ್ತಿ
4) 2016ರಲ್ಲಿ ರಾಜ್ಯಮಟ್ಟದಲ್ಲಿ 'ಉತ್ತಮ ಸಹಕಾರ ಸಂಘ' ಪ್ರಶಸ್ತಿ
5) 2023ರಲ್ಲಿ ಜಿಲ್ಲಾಮಟದಲ್ಲಿ 'ಶ್ರೇಷ್ಠ ಸಹಕಾರ ಸಂಘ' ಪ್ರಶಸ್ತಿ

**ಸಂಘದ ಸದಸ್ಯರಿಗೆ ಸಂಘದಿಂದ ನೀಡುವ ವಿಶೇಷ ಸಹಾಯ ಧನದ ಸೌಲಭ್ಯಗಳು :**

1) ಸಂಘದ ಸದಸ್ಯರ ಮಕ್ಕಳ ವ್ಯಾಸಾಂಗಕ್ಕಾಗಿ ವಿದ್ಯಾಭ್ಯಾಸ ನಿಧಿ.
2) ಸಂಘದ ಸದಸ್ಯರು ಯಾವುದೇ ರೀತಿಯ ಶಸ್ತ್ರ ಚಿಕಿತ್ಸೆ ಹಾಗೂ ರೋಗಗಳಿಗೆ ಒಳಗಾದಲ್ಲಿ ವೈದ್ಯಕೀಯ ನಿಧಿ.
3) ಅಪಘಾತಕ್ಕಿಡಾದ ಸದಸ್ಯರ ಕುಟುಂಬಕ್ಕೆ ಅಪಘಾತ ವಿಮೆಯ ಸೌಲಭ್ಯ ದೊರೆಯುತ್ತದೆ.
4) ನಿಧನರಾದ ಸದಸ್ಯರ ಕುಟುಂಬಸ್ಥರಿಗೆ ಮರಣೋತ್ತರ ನಿಧಿ ನೀಡುವ ಯೋಜನೆ.



**ಸಂಸ್ಥೆಯ ಸಾಮಾಜಿಕ ಕಾರ್ಯಚಟುವಟಿಕೆಗಳು :** 2019–20ನೇ ಸಾಲಿನಲ್ಲಿ ಸಂಸ್ಥೆಯ ವತಿಯಿಂದ ನೆರೆ ಸಂತ್ರಸ್ತರ ಪರಿಹಾರ ನಿಧಿಗೆ, 2020–21ನೇ ಸಾಲಿನಲ್ಲಿ ಸಂಸ್ಥೆಯ ವತಿಯಿಂದ ನೆರೆಸಂತ್ರಸ್ಥರ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ, 2020–21 ನೇ ಸಾಲಿನಲ್ಲಿ ಕೋವಿಡ್–19 ಮುಖ್ಯಂತ್ರಿಗಳ ಪರಿಹಾರ ನಿಧಿಗೆ ಹಾಗೂ ಇದೇ ಸಾಲಿನಲ್ಲಿ ಕೊರೊನಾ ಸೇನಾನಿಗಳಾದ ಆಶಾ ಕಾರ್ಯಕರ್ತೆಯರಿಗೆ ಸಹಾಯ ಧನ ನೀಡುವುದರೊಂದಿಗೆ ಅವರನ್ನು ಅಭಿನಂದಿಸಿದೆ. ಸಂಸ್ಥೆಯ ಸಿಬ್ಬಂದಿಯಿಂದ ರಕ್ತದಾನ ಮಾಡಲಾಗಿದೆ.

**ಸಂಸ್ಥೆಯ ಮುಂದಿನ ಯೋಜನೆಗಳು :** ಬೆಳ್ಳಿ ಮಹೋತ್ಸವದ ಸಂಭ್ರಮಾಚರಣೆಯಲ್ಲಿರುವ ಸಂಶಿ ಅರ್ಬನ್ ಕೋ–ಆಪ್ ಕ್ರೆಡಿಟ್ ಸೊಸೈಟಿ ಮುಂದಿನ ದಿನದಲ್ಲಿ ವ್ಯವಹಾದಲ್ಲಿ ತಂತ್ರಜ್ಞಾನವನ್ನು ಅಳವಡಿಸಿ ಆನ್‌ಲೈನ್ ಬ್ಯಾಂಕಿಂಗ್ ವ್ಯವಸ್ಥೆ ನೀಡುವುದು, ಶಾಖೆಯನ್ನು ವಿಸ್ತರಿಸುವುದು, ಹೊಂದಿರುವ ಶಾಖೆಗೆ ಸ್ವಂತ ಕಟ್ಟಡವನ್ನು ನಿರ್ಮಿಸುವುದು, ಮಾನವ ಸಂಪನ್ಮೂಲವನ್ನು ಇನ್ನು ಹೆಚ್ಚಿನ ರೀತಿಯಲ್ಲಿ ಬಲಪಡಿಸುವುದು ಮತ್ತು ವ್ಯವಹಾರದಲ್ಲಿ ಪ್ರಗತಿಯನ್ನು ಸಾಧಿಸುವುದಾಗಿದೆ.

**ಸಂಸ್ಥೆಯ ಸುಗಮ ವ್ಯವಹಾರ ಹಾಗೂ ಯೋಜನೆಯ ಕ್ರಮಗಳು :**


ಸಂಘದಲ್ಲಿ ಬದ್ಧತೆಯುಳ್ಳ ಹಾಗೂ ದಕ್ಷ ಆಡಳಿತ ನಿರ್ವಹಿಸುವ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕ ಮಂಡಳಿಯು ಇದ್ದು, ಸಂಸ್ಥೆಗಾಗಿ ನಿಸ್ವಾರ್ಥ ಸೇವೆ ಹಾಗೂ ಉತ್ತಮ ನಿರ್ದೇಶನದಿಂದ ಈ ಮಟ್ಟಕ್ಕೆ ಬೆಳೆಯಲು ಸಹಕಾರಿಯಾಗಿದೆ ಅದರ ಜೊತೆಗೆ ಸಂಸ್ಥೆಯ ಸಿಬ್ಬಂದಿ ವರ್ಗ ಪರಿಶ್ರಮದ ಕೆಲಸ ಹಾಗೂ ನಂಬುಗೆ ಸೇವೆ ಈ ಬೆಳವಣಿಗೆಯಲ್ಲಿ ಒಂದು ಮುಖ್ಯವಾದ ಭಾಗ ಎಂದು ಹೇಳಬಹುದು.

ಸಂಘದಲ್ಲಿ ವ್ಯವಹಾರವು ಪ್ರಸ್ತುತ ಮಾರುಕಟ್ಟೆಯ ವಿಶ್ಲೇಷಣೆ ಹಾಗೂ ಪರಿಸ್ಥಿತಿಯನ್ನು ಗಮನಿಸುವುದರೊಂದಿಗೆ ವ್ಯವಹಾರವನ್ನು ನಡೆಸುವುದರಿಂದ ಉತ್ತಮ ವ್ಯವಹಾರ ನಡೆಸಲು ಸಹಕಾರಿಯಾಗಿದೆ.

**ಸಂಸ್ಥೆಯ ಪ್ರಗತಿಯ ಅಂಕಿ ಅಂಶ (ರೂ. ಲಕ್ಷಗಳಲ್ಲಿ)**

| ವಿವರ | ಮೊತ್ತ |
|---|---|
| ಸದಸ್ಯರ ಸಂಖ್ಯೆ | 4964 |
| ಶೇರು ಬಂಡವಾಳ | 68.08 |
| ನಿಧಿಗಳು | 630.88 |
| ಠೇವಣಿಗಳು | 3912.10 |
| ಸಾಲಗಳು | 2273.53 |
| ನಿವ್ವಳ ಲಾಭ | (ನಿರಿಕ್ಷೀಸಿದ್ದು) 115.00 |
| ಸದಸ್ಯರಿಗೆ ಲಾಭಾಂಶ | (ಉದ್ದೇಶಿಸಿದ್ದು) 17% |
| ಲೆಕ್ಕಪರಿಶೋಧನೆ ವರ್ಗ | "ಅ" |

## ಆಡಳಿತ ಮಂಡಳಿ ನಿರ್ದೇಶಕರು


ವ್ಹಿ.ಡಿ. ಅಕ್ಕಿ
ಅಧ್ಯಕ್ಷರು


ಎ.ಬಿ. ಉಪ್ಪಿನ
ಉಪಾಧ್ಯಕ್ಷರು


ಎಸ್.ಸಿ. ಹತ್ತಿ
ನಿರ್ದೇಶಕರು


ಎನ್.ಎಸ್. ಯರೇಶಿನಿ
ನಿರ್ದೇಶಕರು


ಎಸ್.ಎಸ್. ಕಮ್ಮಾರ
ನಿರ್ದೇಶಕರು


ಅಯ್.ಎಂ. ಕೋರಿ
ನಿರ್ದೇಶಕರು


ಎಂ.ಎಚ್. ನಾಯ್ಕರ
ನಿರ್ದೇಶಕರು


ಎಲ್.ವ್ಹಿ. ಕೋರಿ
ನಿರ್ದೇಶಕರು


ಎಂ.ಆರ್. ಯಲ್ಲರಡ್ಡಿ
ನಿರ್ದೇಶಕರು


ಜಿ.ಬಿ. ಸೊರಟೂರ
ನಿರ್ದೇಶಕರು


ಎಂ.ಎನ್. ಪಡತೇರ
ನಿರ್ದೇಶಕರು


ವಿ.ಡಿ. ಸುಂಕದ
ನಿರ್ದೇಶಕರು


ಎಸ್.ಎಫ್. ಹತ್ತಿ
ಜನರಲ್ ಮ್ಯಾನೇಜರ್